ಕರ್ನಾಟಕ ವಿಧಾನ ಸಭೆ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಶನಿವಾರ ದಿನಾಂಕ 24ನೇ ಜನವರಿ 2009 ರಂದು

ಸದನವು ಬೆಳಗಾವಿಯ ಡಾ|| ಬಿ.ಎಸ್.ಜೀರಿಗೆ ಹಾಲ್, ಜೆನ್ಎಂಸಿ ಮೆಮೋರಿಯಲ್ ಆಡಿಟೋರಿಯಮ್‌ನಲ್ಲಿ ಬೆಳಗಾವಿನಲ್ಲಿ ಬೆಳಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು

1. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು :- ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಈಗ ಚರ್ಚೆ ಪ್ರಾರಂಭಿಸಬಹುದು. ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ಮೊನ್ನೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ನಿರ್ಣಯ ತೆಗೆದುಕೊಂಡಿರುವಂತೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಚರ್ಚೆ ನಿನ್ನೆ ಸಾಯಂಕಾಲದವರೆಗೆ ಮುಕ್ತಾಯಗೊಳಿಸಬೇಕಾಗಿತ್ತು ಮತ್ತು ಮರು ದಿನ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಯವರ ಉತ್ತರವೆಂದು ನಿಗದಿಯಾಗಿತ್ತು. ಪ್ರತಿ ಪಕ್ಷದ ನಾಯಕರು ಇದರ ಮೇಲೆ ನಡೆದ ಚರ್ಚೆಯಲ್ಲಿ ಇನ್ನೂ ಪಾಲ್ಗೊಂಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ(ಎಸ್) ನಾಯಕರು ಮಾತನಾಡಿ ಚರ್ಚೆಯಲ್ಲಿ ಭಾಗವಹಿಸಿದ ನಂತರ ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸುತ್ತಾರೆ. ಅನಂತರ, ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ಕಲಾಪವನ್ನು ಮಧ್ಯಾಹ್ನ 1.00 ಗಂಟೆಗೆ ಮುಗಿಸಬೇಕೆಂದು ನಿರ್ಣಯವಾಗಿದೆ. ಆ ದೃಷ್ಟಿಯಿಂದ ಎಲ್ಲರೂ ಸಹಕರಿಸಬೇಕು.

ಮಾನ್ಯ ಉದಾಸಿಯವರೆ, ಮುಖ್ಯಮಂತ್ರಿಗಳು ಮತ್ತು ಇತರ ಸಚಿವರುಗಳನ್ನು ಸದನಕ್ಕೆ ಕರೆಸಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಇರಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವು ಸಂಪೂರ್ಣವಾಗಿ co-operate ಮಾಡುತ್ತಿದ್ದೇವೆ. ಕಳೆದ ಎರಡು ದಿವಸಗಳಿಂದ ರಾತ್ರಿ 10.00 ಗಂಟೆ ತನಕವೂ ಸದನದಲ್ಲಿ ಕುಳಿತುಕೊಂಡಿದ್ದೇವೆ.

ಅಧ್ಯಕ್ಷರು :- ನೀವು ಮತ್ತು ಜೆ.ಡಿ.(ಎಸ್) ನಾಯಕರು ಮಾತನಾಡಿ. ಅನಂತರ, ಸಮಯ ಇದ್ದರೆ, ನೋಡೋಣ. ಸಮಯ ಉಳಿತಾಯವಾದರೆ ಇತರ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡೋಣ. ಬಾಲಕೃಷ್ಣರವರೆ, ಎಲ್ಲಿಯ ವರೆಗೆ ಚರ್ಚೆಯಾಗುತ್ತದೋ ನೋಡೋಣ. ಬಳಿಕ, ಸಮಯ ಸಿಕ್ಕರೆ ಅವಕಾಶ ಕಲ್ಪಿಸಿಕೊಡುತ್ತೇನೆ. ಗರಿಷ್ಠ ಸಂಖ್ಯೆಯಲ್ಲಿ ಶಾಸಕರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಭಾವನೆ ನನ್ನದಾಗಿದೆ. Time availability ಇದ್ದರೆ ನೋಡೋಣ.

ಶ್ರೀ ಬಂಡೆಪ್ಪ ಕಾಶೆಂಪೂರ್ :- ನಮಗೂ ಮಾತನಾಡಲು 10 ನಿಮಿಷ ಸಮಯ ಕೊಡಿ. ಟೈಮ್ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಪ್ರಾರಂಭಿಸಿ. ಒಂದೆರಡು ನಿಮಿಷಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಮುಖ್ಯಮಂತ್ರಿಯವರು ಕಚೇರಿಯಲ್ಲಿದ್ದಾರೆ. ಸದನಕ್ಕೆ ಇನ್ನೇನು ಬರಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಕಚೇರಿಯಲ್ಲಿದ್ದಾರೆ, ತಿಂಡಿ ತಿನ್ನುತ್ತಿದ್ದಾರೆ, ಊಟ ಮಾಡುತ್ತಿದ್ದಾರೆ ಎಂದರೆ ಹೇಗೆ? ಇದು ಅಸೆಂಬ್ಲಿ. ಇದಕ್ಕೆ ಗೌರವ ಕೊಟ್ಟು ಇಲ್ಲಿಗೆ ಬರಬೇಕಾದ್ದು ತುಂಬಾ ಮುಖ್ಯವಾದುದು. ಈಗ ನಾವು ಮಾತನಾಡಲಿಲ್ಲವೆಂದರೆ, ವಿರೋಧ ಪಕ್ಷದ ನಾಯಕರು ಏನೂ ಮಾತನಾಡಲಿಲ್ಲ ಎನ್ನುತ್ತಾರೆ. ನಾವು ಮಾತನಾಡಲು ನಿಂತರೆ, ಮುಖ್ಯಮಂತ್ರಿಗಳು ಇರುವುದಿಲ್ಲ, ಮಂತ್ರಿಗಳೂ ಇರುವುದಿಲ್ಲ, ಯಾರೂ ಇರುವುದಿಲ್ಲ. ಉಳಿದ ಮಂತ್ರಿಗಳು ಎಲ್ಲಿದ್ದಾರೆ?

ಶ್ರೀ ಬಸವರಾಜ ಬೊಮ್ಮಾಯಿ :- ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಎಲ್ಲಿ ಬರುತ್ತಾರೆ? ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ? ನಾವು ನಾಲ್ಕು ಮಾತುಗಳನ್ನಾಡಿದರೆ ಅವರು ನೋಟ್ ಮಾಡಿಕೊಳ್ಳುತ್ತಾರೆ, ಅದಕ್ಕೆ ಪ್ರತಿಕ್ರಿಯಿಸುತ್ತಾರೆ ಅಥವಾ ಸಹಾಯ ಮಾಡುತ್ತಾರೆ, ಅವರು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎನ್ನುವ ದೃಷ್ಟಿಯಿಂದ ಈ ಸಂದರ್ಭದಲ್ಲಿ

ಮಾತನಾಡುವುದು. ನಾವು ಹೊರಗಡೆ ಮಾತನಾಡುವುದಾದರೆ, ಪ್ರೆಸ್ ಕಾನ್‌ಫರೆನ್ಸ್ ಮಾಡಿ ಹೋಗುತ್ತೇವೆ.

ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇವತ್ತು ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣವನ್ನು ಈ ಸದನದ ಮುಂದಿಟ್ಟಿದ್ದಾರೆ. ಮೊದಲನೇ ಪುಟದಲ್ಲಿ ಅವರು ಏನು ಹೇಳಿದ್ದಾರೆಂದರೆ, ಹೋದ ಚುನಾವಣೆಯಲ್ಲಿ ಜಯಭೇರಿ ಹೊಡೆದಿದ್ದರ ಬಗ್ಗೆ ಹೇಳಿಕೊಂಡು ಅದನ್ನೇ ಒಂದು ದೊಡ್ಡ ಸಾಧನೆ ಎಂಬಂತೆ ತಿಳಿದುಕೊಂಡು ಪ್ರಸ್ತಾಪ ಮಾಡಿದ್ದಾರೆ. ಎರಡನೆಯದಾಗಿ, 100 ದಿವಸ ತುಂಬಿದಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಏನೆಂದರೆ,

> "You the people have observed the path our Government has trodden from the moment I took the oath of office in the name of the farmers, on 30th May 2008. You are aware of the efforts we put in to surmount the crisis arising out of the fertilizer shortage right at the dawn of our administration. We have taken other bold measures to wipe the farmers' tears. Ours is a Government that evinces genuine concern for the farmers' welfare. We have been at the forefront in the implementation of pro-farmer programmes and have been viewed as a model for others.
>
> I believe in all sincerity that you the people of the state have endorsed the budget I presented on 17th July 2008."

ಈ ರೀತಿ 100 ದಿವಸಗಳಾದ ನಂತರ ತಮ್ಮ ಒಳ್ಳೆಯ ಚಿತ್ರಣವನ್ನು costly paperನಲ್ಲಿ ಪ್ರಿಂಟ್ ಮಾಡಿಸಿ ಅದಕ್ಕೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಹಂಚಿದ್ದಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ತಾವು ಭಾಷಣ ಪ್ರಾರಂಭಿಸುವ ಮೊದಲು ಬುದ್ಧ, ಬಸವನನ್ನು ನೆನೆಸಿಕೊಂಡು ಪ್ರಾರಂಭಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಯಡಿಯೂರಪ್ಪನವರು ಈ ಮನೆಗೆ ಮುಖ್ಯಮಂತ್ರಿ ಎಂದು ಹೇಳಿದೆ. ಪಾಪ! ಅವರು ನಿರಾಶರಾಗಿ ಆ ದೇವಾಲಯದಲ್ಲಿದ್ದಾರೆ! ನಿಮ್ಮ ವೈಭವ ಕಂಡು, ಎಂತಹ ಪರಿಸ್ಥಿತಿ ಬಂತೆಂದು ಪರಿತಪಿಸುತ್ತಿದ್ದಾರೆ. ನುಡಿದಂತೆ ನಡೆಯದಿರತಕ್ಕ ಮುಖ್ಯಮಂತ್ರಿಗಳು ಬಂದಿದ್ದಾರೆ ಮತ್ತು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂದು ತಮ್ಮ ಪ್ರಥಮ ಭಾಷಣದಲ್ಲಿ ಅವರೇ ಬರೆದುಕೊಂಡು ಹೇಳಿದ್ದಾರೆ. ಆದರೆ, ಅದು ಆಚರಣೆಯಲ್ಲಿಲ್ಲ.

ಇಂಥ ಒಂದು ಒಳ್ಳೆಯ ಪುಸ್ತಕವನ್ನು ನೂರುದಿನಕ್ಕೆ ಒಂದು ಇನ್ನೂರು ದಿನಕ್ಕೆ ಒಂದು ಪ್ರಿಂಟ್ ಮಾಡಿ ಮಾಡಿ ಅದಕ್ಕಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಅವರು ಎಲ್ಲೆಲ್ಲಿ ಹೋಗಿದ್ದಾರೆ, ಎಲ್ಲೆಲ್ಲಿ ಹೋಗಿಲ್ಲ ಎನ್ನುವ ಬಗ್ಗೆ ಪುಸ್ತಕವನ್ನು ಬರೆದು ಹಂಚಿಕೆ ಮಾಡಿದ್ದಾರೆ. ಇದನ್ನು ನೀಡಿದಂಥ ಪರಿಸ್ಥಿತಿ ಏನಿದೆ ಎಷ್ಟರಮಟ್ಟಿಗೆ ಇವರು ಸಾಧನೆ ಮಾಡಿದ್ದಾರೆ ಎನ್ನತಕ್ಕದ್ದು ಬಹಳ ಮುಖ್ಯ. ಯಾವ ಸಂವಿಧಾನದ ಆಧಾರದ ಮೇಲೆ ಶಪಥ ಮಾಡಿ ಅಧಿಕಾರ ಪದಗ್ರಹಣ ಮಾಡಿ ಅದನ್ನು ರಕ್ಷಣೆ ಮಾಡುತ್ತೇನೆ, ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತೇನೆ, ಈ ರಾಜ್ಯದ ಎಲ್ಲಾ ಜನರನ್ನು ಸರಿಸಮಾನವಾಗಿ ನೋಡಿಕೊಳ್ಳುತ್ತೇನೆ ಎನ್ನತಕ್ಕಂಥ ಸಾರಂಶವೇನಿದೆ ಅದಕ್ಕೆ ಸಂಪೂರ್ಣವಾಗಿ ತಿಲಾಂಜಲಿ ಕೊಟಂಥ ಸರ್ಕಾರ ಯಾವುದಾದರೂ ಇದ್ದರೆ, ಯಾರಾದರು ಮುಖ್ಯಮಂತ್ರಿಯವರು ಇದ್ದರೆ ಅದು ಖಂಡಿತವಾಗಿ ಮಾನ್ಯ ಯಡಿಯೂರಪ್ಪನವರು. Discriminate ಮಾಡುವುದರಲ್ಲಿ hatred politics ಮಾಡುವುದರಲ್ಲಿ ಅವರಿಗೆ ಮೊದಲ ಬಹುಮಾನ ಬರುತ್ತದೆ. ಸಮಗ್ರವಾದ ಕರ್ನಾಟಕ ರಾಜ್ಯ ಅಭಿವೃದ್ಧಿ ಮಾಡುತ್ತೇನೆಂದು ಏನು ಹೇಳುತ್ತಿದ್ದಾರೆ ಅದು ನಿಜವಾಗಿಯೂ ಅವರ ಬಜೆಟ್ ನೋಡಿದಾಗ, ಅವರ ಸರ್ಕಾರಿ ಆಜ್ಞೆಯನ್ನು ನೋಡಿದಾಗ, ಕೊಟ್ಟಿರುವ ಗ್ರಾಂಟ್‌ನ್ನು ನೋಡಿದಾಗ ಗೊತ್ತಾಗುತ್ತದೆ. ಒಂದೊಂದೇ ವಿಚಾರವನ್ನು ನಾನು ಸಾಧ್ಯವಾದ ಮಟ್ಟಿಗೆ ತಮ್ಮ ಮುಂದಿಡುತ್ತಿದ್ದೇನೆ. ಅದು ಸರಿಯಿದ್ದರೆ ನನ್ನ ಮಾತಿಗೆ ಬೆಲೆ ಕೊಡಿ.

ಇಲ್ಲದಿದ್ದರೆ ನಾನು ಹೇಳಿರತಕ್ಕದ್ದು ರಾಜಕೀಯವಾಗಿದೆಯೆಂದರೆ ನಾನು ನಿಮ್ಮ ಕ್ಷಮೆಕೋರುತ್ತೇನೆ. ಆದರೆ, ಇವತ್ತು ಬಿ.ಜೆ.ಪಿ. ಸರ್ಕಾರ ಬಂದ ತಕ್ಷಣ 100 ದಿನದ ವೈಭವೀಕರಣವಾಯಿತು. 200 ದಿನಕ್ಕೆ ಒಂದು ಆಯಿತು. ಎಲ್ಲ ಕಡೆ ಹೇಳಿರತಕ್ಕದ್ದನ್ನೇ ಹೇಳಿದ್ದಾರೆ. 50 ವರ್ಷದಲ್ಲಿ ಈ ಕಾಂಗ್ರೆಸ್‌ನವರು ಏನೂ ಸಾಧನೆ ಮಾಡಲಿಲ್ಲ. ಅದನ್ನು ಈ ಬಿ.ಎಸ್. ಯಡಿಯೂರಪ್ಪ ಮಾಡಿಕೊಟ್ಟಿದ್ದಾನೆ. ಈ ಯಡಿಯೂರಪ್ಪ ಬಂದಿದ್ದಾನೆ ಎಂದು ಹೇಳಿಕೊಂಡು ಕಾಲಹರಣ ಮಾಡಿ ಪ್ರಗತಿ ಏನು ಮಾಡಬೇಕು ಅದನ್ನು ಮಾತ್ರ ಏನೂ ಮಾಡಲಿಲ್ಲ. ನನಗೆ ಆಶ್ಚರ್ಯವೇನೆಂದರೆ ಇಲ್ಲಿ ಅನೇಕ ಹಿರಿಯ ಸದಸ್ಯರುಗಳು, ವಯಸ್ಸಾಗಿರುವವರು ಸಹ ಅನೇಕ ಸಲ ಶಾಸಕರಾಗದೇ ಇರಬಹುದು, ಆದರೆ, ಅವರು ವಯಸ್ಸಿಯಲ್ಲಿ ಹಿರಿಯರು. ಈ ಭಾಗದ ಇತಿಹಾಸ ಗೊತ್ತಿರತಕ್ಕವರು. ಅಂಥವರು ಕೂಡ ಮಾತನಾಡುವುದನ್ನು ನೋಡಿದೆ. 50 ವರ್ಷದಿಂದ ಈ ಭಾಗದಲ್ಲಿ ಏನೂ ಆಗಿಲ್ಲ, ಈಗ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾದಮೇಲೆ ನಾವು ಸ್ವಲ್ಪ ಅಭಿವೃದ್ಧಿಯನ್ನು ಕಂಡಿದ್ದೇವೆಂದು ಹೇಳಿದರು. ಅಂದರೆ ಈ ಗಡಿ ಭಾಗವನ್ನು ಉಳಿಸುವುದಕ್ಕೋಸ್ಕರ ಏನು ಪ್ರಯತ್ನ ನಿಜಲಿಂಗಪ್ಪನವರು, ದೇವರಾಜ ಅರಸುರವರು, ವೀರೇಂದ್ರ ಪಾಟೀಲ್‌ರವರು, ಜತ್ತಿಯವರು, ಗುಂಡೂರಾವ್‌ರವರು, ಹೆಗಡೆಯವರು ಮಾಡಿದರು ಅವೇನೂ ಇಲ್ಲ ಇವರ ಮುಂದೆ! ಎಲ್ಲವನ್ನು ಇವರೇ ಮಾಡಿದ್ದು! ಎಲ್ಲವನ್ನೂ 8 ತಿಂಗಳಿನಲ್ಲೇ ನೀವು ಹುಟ್ಟಿಸಿದ್ದು! ವಿಶ್ವಾಮಿತ್ರನ ಪ್ರತಿಸೃಷ್ಟಿಯನ್ನು ಮಾಡತಕ್ಕವರು ಒಂದು ಹೊಸ ಸೃಷ್ಟಿಯನ್ನು ನಿರ್ಮಾಣ ಮಾಡತಕ್ಕವರು. ಬಿಜಾಪುರದ ಒಬ್ಬರು ಮಾತನಾಡಿದರು. ಇರಬಹುದು ಆ ಕಾಲದಲ್ಲಿ 2 ಕೋಟಿ ರೂಪಾಯಿ ಕೊಟ್ಟರೆ ಖಂಡಿತವಾಗಿ ಒಂದು ದೊಡ್ಡ ಪ್ರಾಜೆಕ್ಟ್ ಆಗುತ್ತಿತ್ತು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ, ನಮ್ಮಲ್ಲಿ ಏನೂ ಮಾಡಲಿಲ್ಲವಂದರೆ ಹೇಗೆ? ನಾವು ಏನೂ ಮಾಡಿದಿದ್ದರೆ ಇವತ್ತು ಮುದ್ದೇಬಿಹಾಳದಲ್ಲಿ ನೀರು ಬರುತ್ತಿತ್ತೇ? ಮುದೋಳ್‌ನಲ್ಲಿ ನೀರು ಬರುತ್ತಿತ್ತೇ? ಮಲಪ್ರಭ ಮತ್ತು ಘಟಪ್ರಭದಲ್ಲಿ ಡ್ಯಾಂನ್ನು ಕಟ್ಟಿ ನೀರನ್ನು ನಿಲ್ಲಿಸುತ್ತಿದ್ದಾರೆ? ಇಲ್ಲಿ ಇವತ್ತು ಹತ್ತಾರು ಸಕ್ಕರೆ ಕಾರ್ಖಾನೆಗಳು ಇದೆ. ನಾವು ಏನೂ ಮಾಡದಿದ್ದರೆ ಸ್ವಾತಂತ್ರ್ಯ ಪೂರ್ವದಲ್ಲಿ ಅವುಗಳು ಇದ್ದವೇ? ಈ ಮೆಡಿಕಲ್ ಕಾಲೇಜು ಇತ್ತೇ? ಇಂಜನಿಯರಿಂಗ್ ಕಾಲೇಜುಗಳು ಇದ್ದವೇ? ಇವತ್ತು ಸಾವಿರಾರು ಸಂಸ್ಥೆಗಳೇನು ಬಂದಿದೆ ಅವೆಲ್ಲವನ್ನೂ ಕೂಡ ಹಂತ ಹಂತವಾಗಿ ಕ್ರಮೇಣವಾಗಿ ಅಭಿವೃದ್ಧಿಗೋಸ್ಕರ ಬಂದಿದೆ. ಗಡಿಭಾಗವಾದ ಇಲ್ಲಿ ಮರಾಠಿ ಮಾತನಾಡುವವರ ಸಂಖ್ಯೆ ಜಾಸ್ತಿ ಇದೆಯೆಂದು

ಪ್ರಥಮವಾಗಿ ದೇವರಾಜ ಅರಸುರವರು ಎಲ್ಲ ವಿಭಾಗೀಯ ಕಛೇರಿಗಳನ್ನು ಬೆಳಗಾವಿಗೆ ಶಿಫ್ಟ್ ಮಾಡಿದರು. ಇದು ಸತ್ಯಕ್ಕ ದೂರವಾದದ್ದೇ? ನಾವು ಇಲ್ಲಿನ ಅಭಿವೃದ್ಧಿಗೋಸ್ಕರ ಏನೂ ಮಾಡಲಿಲ್ಲವೇ? ಎಲ್ಲಾ ಆಫೀಸ್‌ಗಳು ಇಲ್ಲಿಗೆ ಬಂದು ಬೆಳಗಾವಿ ಒಂದು ವಿಭಾಗವೆಂದು ಆದಮೇಲೆ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರು ವಾಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಕನ್ನಡಿಗರಿಗೆ ಮನೆಗಳನ್ನು ಕೊಡಬೇಕೆಂದು ಹೌಸಿಂಗ್ ಬೋರ್ಡ್‌ನಿಂದ ವಿಶೇಷ ಸ್ಕೀಮ್ ಮಾಡಿ ಸಾವಿರಾರು ಮನೆಗಳನ್ನು ಕಟ್ಟಿಸಿ ಇಲ್ಲಿ ವಾಸ ಮಾಡುವುದಕ್ಕೆ ಕೊಟ್ಟರು. ಇದು ಸುಳ್ಳೆ? ಆದ್ದರಿಂದ ನೀವು ಎಷ್ಟು ಮಾಡಿದ್ದೀರಿ ಅಷ್ಟು ಮಾತ್ರ ಹೇಳಿಕೊಳ್ಳಿ. ನೀವು ಮುರಿದ ಸೈಕಲ್ ಕೊಟ್ಟಿದ್ದೀರಿ ಪರವಾಗಿಲ್ಲ. ಅವು ರಿಪೇರಿಗೆ ಹೋಗುತ್ತದೋ ಬಿಡುತ್ತದೋ ಆ ಮಾತು ಬೇರೆ. ಮಠಮಂದಿರಗಳಿಗೆ ದುಡ್ಡು ಕೊಟ್ಟಿದ್ದೀರಿ, ಅದನ್ನು ಹೇಳಿಕೊಳ್ಳಿ. ಆದರೆ, ಮೂಲಭೂತ ಸೌಕರ್ಯ ಕೊಟ್ಟಂಥ ಮುಖ್ಯಮಂತ್ರಿಗಳಿಗೆ, ಮೂಲಭೂತ ಸೌಕರ್ಯವನ್ನು ಕೊಟ್ಟಂಥ ಪಕ್ಷಗಳಿಗೆ ಇವತ್ತು ನೀವು ಏನೇನು ಮಾಡಿಲ್ಲವೆಂದು ದೊಡ್ಡ ಬಾಯಿ ಇದೆಯೆಂದು ಹೇಳಿ ಎಲ್ಲವನ್ನೂ ಹೇಳಿಕೊಂಡು ಹೋಗುತ್ತಾ ಹೋದರೆ ಸರಿಯಲ್ಲ. ಅದಕ್ಕೆ ತಾಳ್ಮೆ ಮುಖ್ಯ. ಅದನ್ನು ನೋಡಿ ನಿಮ್ಮ ಮಟ್ಟಿಗೆ ನೀವು ಏನು ಮೂಲಭೂತ ಸೌಕರ್ಯವನ್ನು ನಿಮ್ಮ ಅವಧಿಯಲ್ಲಿ ಯಾರು ಅರ್ಥ ಸಚಿವರಾಗಿ ಮುಖ್ಯಮಂತ್ರಿಗಳಾಗಿ 27 ತಿಂಗಳಿನಲ್ಲಿ ಕೊಟ್ಟಿದ್ದೀರೊ ಅದನ್ನು ಮೊದಲು ಒಂದು ಪಟ್ಟಿ ಮಾಡಿ. ಅದು ಎಷ್ಟರ ಮಟ್ಟಿಗೆ ಸಾಧನೆಯಾಗಿದೆ. ನಿಮ್ಮ ಆರ್ಥಿಕ ಗುರಿಯೇನಿದೆ, ನಿಮ್ಮ ಭೌತಿಕ ಸಾಧನೆಯೇನಿದೆ, ಎನ್ನುವುದನ್ನು ಹೇಳಿದರೆ ಪರವಾಗಿಲ್ಲ. ಈಗ ಮಂತ್ರಿಮಂಡಲವನ್ನು ವಿಸ್ತರಿಸುತ್ತೀರೇನೋ ಗೊತ್ತಿಲ್ಲ. ಏಕೆಂದರೆ ಬಹಳಷ್ಟು ಜನರು ನಿಮ್ಮನ್ನು ಹೊಗಳಿ ಹೊಗಳಿ ಆಡುತ್ತಿದ್ದಾರೆ. ನಿಮ್ಮದೊಂದು ದರ್ಬಾರು ನಡೆದಿದೆ, ನಡೆಯಲಿ. ನಾನು ಪೀಠಿಕೆಯಲ್ಲಿ ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸಾಕಷ್ಟು ಪ್ರಯತ್ನ ಹಿಂದೆಯೂ ನಡೆದಿದೆ, ಇನ್ನೂ ಆಗಬೇಕಾಗಿದೆ. ಇದನ್ನು ಯಾರೂ ಸಹ ಅಲ್ಲಗಳೆಯುವುದಿಲ್ಲ. ಈ ದೇಶದಲ್ಲೇ ನಾವೆಲ್ಲರು ಕೂಡಿ ಒಂದು ಕಡೆ ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ ಮಾಡಬೇಕೆಂದರೆ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ಹೆಜ್ಜೆ ಇಡಬೇಕೆಂದರೆ, ಯಾವ ದೇಶದಲ್ಲಿ ಸ್ವಾತಂತ್ರ್ಯ ಸಿಕ್ಕಿ 60 ವರ್ಷಗಳಾದರೂ ಎಲ್ಲರೂ ಪ್ರಯತ್ನ ಮಾಡಿದರು ಸಹ ಇವತ್ತು ನಾವು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಆಗಿಲ್ಲ. ಎಲ್ಲರೂ ಹೇಳುತ್ತಾರೆ. ಅದೇ ರೀತಿ 60 ವರ್ಷದಿಂದ ಎಲ್ಲರೂ ಪ್ರಯತ್ನ ಮಾಡಿದರೂ ಸಹ ನಮ್ಮ ಬಡತನವನ್ನು ನೀಗಿಸಲು ಇನ್ನೂ ಆಗುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿದೆ. ಅದನ್ನು ಈ 50

ವರ್ಷದಲ್ಲಿ ಎಲ್ಲವನ್ನು ಕೆಡಿಸಿ ಇಟ್ಟರು! ಆಲಮಟ್ಟಿ ಡ್ಯಾಂನ್ನು ಕಟ್ಟಬಾರದಿತ್ತು! ನಾರಾಯಣಪುರ ಡ್ಯಾಂ ಮಲಪ್ರಭ ಡ್ಯಾಂ ಕಟ್ಟಬಾರದಿತ್ತು! ನಾವು ಇದನ್ನು ಕಟ್ಟಿ ಕೆಡಿಸಿದೆವು! ಯಾವ ದೇಶದಲ್ಲಿ ಅಮೆರಿಕಾದ ಗೋಧಿಗಾಗಿ ಜನರು ಕ್ಯೂನಲ್ಲಿ ನಿಂತು ರೇಷನ್ ಅಂಗಡಿಯಿಂದ ತಂದು ತಿನ್ನುತ್ತಿದ್ದರು, ಆ ದೇಶದಲ್ಲಿ ಇವತ್ತು ಆಹಾರದ ಉತ್ಪಾದನೆ ಹೆಚ್ಚಾಗಿ ಕೂಲಿಗಾಗಿ ಕಾಳು ಎನ್ನುವುದಕ್ಕೆ ಕೊಡುತ್ತಿದ್ದೇವೆ. ಅಂಥ ಅಭಿವೃದ್ಧಿ ಇವತ್ತು ಸ್ವಲ್ಪ ಮಟ್ಟಿಗೆ ಆಗಿದೆ. ಅದನ್ನು ಹೀಯಾಳಿಸಿ ಮಾತನಾಡುವವರಿಗೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. 'ಸಂಕಲ್ಪ' ಎಂಬ ಪುಸ್ತಕ ನೋಡಿ ಮುಖ್ಯಮಂತ್ರಿಯವರ ಪುಸ್ತಕ ನೋಡಿ ಹೇಗಿದೆ? manifestoನ್ನು ಪ್ರಿಂಟ್ ಮಾಡಿದ್ದಾರೆ. ಅದನ್ನು ಮಾಡುವುದಕ್ಕೆ ಇವರಿಗೆ ಕಾಗದ ಸರಿಯಾಗಿ ಸಿಗಲಿಲ್ಲ. ಸರಿಯಾಗಿ ನೋಡಲಿಲ್ಲ. ಆದರೆ ಅವರ ಇತರೆ ಪುಸ್ತಕಗಳನ್ನು ನೋಡಿ ಎಷ್ಟು ಚೆನ್ನಾಗಿ ಮಾಡಿದ್ದಾರೆ, ಮಿರಿಮಿರಿ ಮಿಂಚುತ್ತದೆ. ಆದರೆ ಅವರ ಸಂಕಲ್ಪ ಪುಸ್ತಕವನ್ನು ನೋಡಿದರೆ ಹರುಕ ಮುರುಕ, ಯಾವುದೂ ಪೇಪರ್ ಸಿಗದೇ ಇರುವಂತೆ manifesto print ಮಾಡಿದ್ದಾರೆ. ಇವರ ಸಾಧನೆಯ ಪುಸ್ತಕವನ್ನು ಪ್ರಿಂಟ್ ಮಾಡಿರುವುದನ್ನು ನೋಡಿದರೆ ಎಷ್ಟು ಮಾನಸಿಕವಾಗಿ ಇವರು ಬದಲಾವಣೆಯಾಗಿದ್ದಾರೆ, ಅದೇ ರೀತಿ ಆರ್ಥಿಕವಾಗಿ ಸಹ ಎಷ್ಟು ಶಕ್ತಿಶಾಲಿಯಾಗಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ.

2 ರೂ.ಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದರು. ಅದು ಎಲ್ಲಿದೆಯೋ ಗೊತ್ತಿಲ್ಲ. ವೋಟ್ ತೆಗೆದುಕೊಳ್ಳುವ ಸಲುವಾಗಿ 2 ರೂ.ಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದರು. ನಾವು 3 ರೂ.ಗೆ ಕೊಡುತ್ತೇವೆ ಎಂದರೆ, ಇವರು 2 ರೂ.ಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದರು. ನಾವು 2 ಎಂದರೆ ಅವರು 1. ನಾವು 6 ರೂ. ಎಂದರೆ ಅವರು 3 ರೂ. ಈ ರೀತಿ competition ನಡೆಯಿತು. ಈ competitionನಲ್ಲಿ ಇವತ್ತಿನ ದಿವಸ ಅವರು 110 ಸೀಟುಗಳನ್ನು ತಂದರು. ಆದರೆ ನಾನು ಕೇಳುತ್ತೇನೆ, 2 ರೂ.ಗೆ ಕೆ.ಜಿ. ಅಕ್ಕಿ ಎಲ್ಲಿದೆ? ಅದು ಪುಸ್ತಕದಲ್ಲೇ ಉಳಿಯಿತು. ರೈತರಿಗೆ upto 10 HP ಉಚಿತ ವಿದ್ಯುಚ್ಛಕ್ತಿ ಕೊಡತಕ್ಕ ಮಾತು ಹೇಳಿದ್ದಿರಿ. ಇವತ್ತು ಅವರಿಗೆ ಸತತವಾಗಿ ವಿದ್ಯುತ್ supply ಕೊಟ್ಟು, ನಾವು ಮಾಫಿ ಮಾಡಿದ್ದೇವೆ ಎಂದರೆ ಅದಕ್ಕೊಂದು ಬೆಲೆ ಇರುತ್ತಿತ್ತು. ನಿಮ್ಮಲ್ಲಿ supply ಮಾಡುವುದಕ್ಕೆ ವಿದ್ಯುಚ್ಛಕ್ತಿಯೇ ಇಲ್ಲ. ನಿಮಗೆ ಬೇಕಾದಷ್ಟು ಇವತ್ತು ವಿದ್ಯುಚ್ಛಕ್ತಿಯ ಉತ್ಪಾದನೆಯೂ ಇಲ್ಲ, ಅದರ ಕೊರತೆ ಇದೆ. ಅದಕ್ಕೆ ನೀವು ಈಗಾಗಲೇ ಲಿಮಿಟ್ ಹಾಕಿದ್ದೀರಿ. ಒಂದು ಸಾರಿ free ಎಂದು

ಹೇಳುವುದು, ಇನ್ನೊಂದು ಸಾರಿ 24 hours ಎಂದು ಹೇಳುವುದು, ಇನ್ನೊಂದು ಸಾರಿ load shedding ಎಂದು ಹೇಳುವುದು, ಇನ್ನೊಂದು ಸಾರಿ un-scheduled load shedding ಎಂದು ಹೇಳುವುದು ಮಾಡಿದಿರಿ. ನಾನು ನಿಮಗೆ ಬೇಕಾದರೆ date-wise ಕೊಡುತ್ತೇನೆ. ನನ್ನ ಹತ್ತಿರ ಆ ಮಾಹಿತಿ ಇದೆ. ಮಾನ್ಯ ಈಶ್ವರಪ್ಪನವರು ಜುಲೈ 17ರಿಂದ ನವೆಂಬರ್‌ವರೆಗೆ ಏನು ಮಾತನಾಡಿದ್ದಾರೆ ಎಂಬ ಬಗ್ಗೆ date-wise ನನ್ನ ಹತ್ತಿರ ಮಾಹಿತಿ ಇದೆ. ಒಂದು ದಿವಸ load shedding ಇದೆ ಎಂದು ಹೇಳಿದರೆ, ಮತ್ತೆ ಮರು ದಿವಸವೇ load shedding withdraw ಮಾಡುತ್ತೇವೆಂದು ಹೇಳುತ್ತಿದ್ದರು. ಅದರ ಎಲ್ಲಾ ವಿವರ ನನ್ನ ಬಳಿ ಇದೆ. ಶಿವಮೊಗ್ಗದಲ್ಲಿ ಸ್ವಲ್ಪ ಮಳೆ ಬಂತು ಎಂದರೆ, free ಎಂದು ಹೇಳಿಬಿಡುವುದು, load shedding ಇಲ್ಲವೆಂದು ಹೇಳಿಬಿಡುವುದು. ಮತ್ತೆ ಮಳೆ ನಿಂತ ತಕ್ಷಣ, ಇಲ್ಲ, load shedding ಇದೆ ಎಂದು ಪುನಃ ಹೇಳುವುದು. ಈ ರೀತಿ ಹೇಳಿಕೊಂಡೇ ನೀವು ಕಾಲ ಕಳೆದಿರಿ. ಆದರೆ ಹೇಳುವುದನ್ನು ಮಾತ್ರ ನೀವು ಬಿಡುವುದಿಲ್ಲ. ಸುದೈವದಿಂದಲೋ ಅಥವಾ ದುರ್ದೈವದಿಂದಲೋ ಆ ಪಕ್ಷದಲ್ಲಿ vocal ಜನ ಬಹಳ ಇದ್ದಾರೆ, ಮಾತನಾಡುವವರು ಬಹಳ ಇದ್ದಾರೆ. ಮಾತನಾಡಿದ್ದೇ ಆಡಿದ್ದು, ಮಾತನಾಡಿದ್ದೇ ಆಡಿದ್ದು. Promise ಮಾಡಿದ್ದೇ ಮಾಡುವುದು. ಅನೇಕ promise ಮಾಡುವುದು, ಆದರೆ ಅವುಗಳನ್ನು fulfil ಮಾಡುವುದಿಲ್ಲ. ಯಾರು ಕೇಳುತ್ತಾರೆ? ಮುಂದೆ ನೋಡೋಣ. ಇಲ್ಲಿ ಗೆಲ್ಲುವುದು important ಎಂದು ಹೇಳುತ್ತಾರೆ. ಮೊದಲು ಗೆದ್ದು ಮುಂದೆ ನೋಡೋಣ ಎಂದು ಹೇಳಿ, ರೈತರಿಗೆ ಮೋಸ ಮಾಡಿದ್ದೀರಿ. ಪಾಪ 15-16 ಲಕ್ಷ ಪಂಪ್‌ಸೆಟ್ ಬಳಕೆದಾರರು ಗೋಳೋ ಎಂದು ಅಳುತ್ತಿದ್ದಾರೆ. ಏಕೆಂದರೆ, ಇವರನ್ನು ನಂಬಿ ಅನೇಕ ರೈತರು ಕಬ್ಬು ಮತ್ತು ಇತರ ಬೆಳೆಗಳನ್ನು ಹಾಕಿದರು. ಇವರು ಸಮಯದ ಪ್ರಕಾರ ವಿದ್ಯುತ್ supply ಮಾಡಲಿಲ್ಲ. ಕೆಲವು ಕಡೆ 2 ತಾಸು ಅಥವಾ 3 ತಾಸನ್ನೂ ಸಹ ಕೊಡಲಿಕ್ಕೆ ಆಗಲಿಲ್ಲ. ನಾನೇ ಎಷ್ಟೋ ಸಾರಿ ನನ್ನ ಮತಕ್ಷೇತ್ರದಲ್ಲಿ ಸಮಸ್ಯೆ ಇದೆ ಎಂದು ಎಂ.ಡಿ.ಯವರಿಗೆ ಫೋನ್ ಮಾಡಿದ್ದೇನೆ. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಮಾಲೂರಿನಲ್ಲಿ 24 hours electricity ಕೊಡುತ್ತಿದ್ದಾರೆಂದು ಹೇಳಿದ್ದರು. ನಾನು KDP meetingನಲ್ಲಿ ಇದ್ದಾಗ ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ಗಲಾಟೆ ನಡೆಯಿತು. ನಾನು ತಕ್ಷಣ ಮಾನ್ಯ ಮುಖ್ಯಮಂತ್ರಿಗಳನ್ನು contact ಮಾಡಿದೆ. ಆಗ ಮಾನ್ಯ ಮುಖ್ಯಮಂತ್ರಿಗಳು

ಮಾಲೂರಿನಲ್ಲಿ 24 ತಾಸು ವಿದ್ಯುತ್ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ, ಅದನ್ನೇ ನಿಮ್ಮ ಚಿತ್ತಾಪುರದಲ್ಲೂ ಕೂಡ introduce ಮಾಡುತ್ತೇನೆಂದರು. ಮೊನ್ನೆ ಅದರ ಬಗ್ಗೆ ಇರುವ document ಅನ್ನು ನಾನು ನೋಡಿದೆ. ಅದರಲ್ಲಿ ಚಿತ್ತಾಪುರ ಹೆಸರೇ ಇಲ್ಲ. KDP meetingನಲ್ಲಿದ್ದಾಗ ನಾನು ಅಲ್ಲಿಂದ ಮಾನ್ಯ ಮುಖ್ಯಮಂತ್ರಿಗಳಿಗೆ telephone ಮಾಡಿ, ನಾನು ಈಗ ತಾನೇ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ, ನಿಮ್ಮ ಸಮಸ್ಯೆ ಬಗೆಹರಿಯುತ್ತದೆ, 24 ತಾಸು electricity supply ಈ ತಾಲ್ಲೂಕಿನಲ್ಲಿ ಮಾದರಿಯಾಗಿ ಕೊಡುತ್ತಾರಂತೆ ಎಂದು ಹೇಳಿದೆ. ನಾನು ಆ ರೀತಿ ಹೇಳಿದ ಕೂಡಲೆ, ಅಲ್ಲಿದ್ದವರು, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಏನಾದರೂ ನನ್ನ ಮೇಲೆ challenge ಮಾಡಿದಾಗ ಯಾವ ರೀತಿಯಾಗಿ ಅವರ ಪಕ್ಷದ ಸದಸ್ಯರು ಇಲ್ಲಿ ದಬದಬ ಎಂದು ಮೇಜನ್ನು ಬಡಿಯುತ್ತಾರೋ, ಆ ರೀತಿಯಲ್ಲಿ KDP meetingನಲ್ಲಿ 'ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರಂತೆ' ಎಂದು ಖುಷಿಯಿಂದ ದಬದಬ ಮೇಜನ್ನು ಬಡಿದು, ನನ್ನ ಮಾತನ್ನು ಸ್ವಾಗತಿಸಿದರು. ಆದರೆ ಅದು ಯಾವ documentನಲ್ಲೂ ಇಲ್ಲ. ಇದುವರೆಗೂ ಅದರ ಪ್ರಸ್ತಾಪವೇ ಇಲ್ಲ. ಏಕೆ ಆ ರೀತಿ ಹೇಳುತ್ತೀರಿ? ನೀವು ಹೇಳಿದಿರಿ ಎಂದು ನಾವೂ ಸಹ ಹೇಳಿದೆವು. ಅದು ಜಾರಿಯಾಗದಿದ್ದಾಗ ಜನರು ಕಏಕೋ ಸಾಹೇಬರು ಇತ್ತೀಚೆಗೆ ಸುಳ್ಳು ಹೇಳಲಿಕ್ಕೆ ಶುರು ಮಾಡಿದ್ದಾರೆಕಿ ಎಂದು ಮಾತನಾಡಿಕೊಳ್ಳುತ್ತಾರೆ. ತಮ್ಮೆಲ್ಲರ ಸಹಕಾರದಿಂದ 9 ಸಲ ಆರಿಸಿ ಬಂದಿದ್ದೇನೆ. ಈ ರೀತಿಯಾಗಿ ಹೇಳಿಕೊಂಡು ಹೋದರೆ, ನಮ್ಮ credibilityಯೇ ಹೋಗುತ್ತದೆ. ಆದ್ದರಿಂದ, ದಯವಿಟ್ಟು ನಮ್ಮಂತಹವರಿಗಾದರೂ ಮೋಸ ಮಾಡಬೇಡಿ. ಜನರಿಗೂ ಮೋಸ, ನಮಗೂ ಮೋಸ. ನೀವು ಯಾರ್ಯಾರಿಗೆ ಟೋಪಿ ಇಡಬೇಕೆಂದು ಮಾಡಿದ್ದೀರಿ? ನಿಮ್ಮ ಕುರ್ಚಿಯಂತೂ ಕಾಯಂ ಮಾಡಿಕೊಂಡಿರಿ. ವಿರೋಧ ಪಕ್ಷದಲ್ಲಿ ಕುಳಿತಾಗ, ಏನೊಂದು ಆವೇಶ ಇತ್ತು, ಎಂದರೆ ಒಂದು ಕ್ಷಣ ಆ ಕುರ್ಚಿ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ, ಅದೇನು ಕುರ್ಚಿಯೇ ಹಾರಿಸುತ್ತಿತ್ತೋ, ಇವರೇ ಹಾರುತ್ತಿದ್ದರೋ ಗೊತ್ತಿಲ್ಲ. ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿಗೆ ಓಡಾಡುತ್ತಿದ್ದರು. ಯಾರಾದರೂ walk-out ಮಾಡಲಿಲ್ಲವೆಂದರೆ, ಕಬನ್ನಿಕಿ ಎಂದು ಎಲ್ಲರನ್ನೂ ಕರೆದುಕೊಂಡು ಹೊರಗೆ ಹೋಗುತ್ತಿದ್ದರು. ಈಗ ಯಾವುದಾದರೂ ಸಮಸ್ಯೆಯನ್ನು ಅವರ ಮುಂದಿಟ್ಟರೆ, ಗಂಭೀರವಾಗಿ ಕುಳಿತಿರುತ್ತಾರೆ. ಪಾರ್ವತಿ ಡ್ಯಾನ್ಸ್ ಮಾಡಿ ಕಣ್ಣು ತೆರೆಸುವವರೆಗೆ ಆ

ಶಿವ ಹೇಗೆ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾನೋ, ಹಾಗೆ ಇವರೂ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾರೆ. ನೀವು ಏನಾದರೂ ಹೇಳಿ, ನನಗೆ ಕುರ್ಚಿ ಸಿಕ್ಕಿದೆ ಸಾಕು, ಬಾಕಿ ತೆಗೆದುಕೊಂಡು ಏನು ಮಾಡಬೇಕು? ಎಂದು ಅವರು ಕಣ್ಣು ಮುಚ್ಚಿಕೊಂಡೇ ಕುಳಿತಿರುತ್ತಾರೆ. ಹೀಗೆ electricityಯದೂ ಆಗಲಿಲ್ಲ. ಕಾಂಗ್ರೆಸ್‌ನವರು ತಮ್ಮ manifestoದಲ್ಲಿ 1000 ರೂ.ಗಳನ್ನು stipend ಕೊಡುತ್ತೇವೆಂದು ಹೇಳಿದ್ದಾರೆ, ಆದರೆ ನಾವು ನಿಮಗೆ 1200 ರೂ.ಗಳನ್ನು ಕೊಡುತ್ತೇವೆಂದು ಹೇಳಿ ಎಲ್ಲ ಯುವಕರನ್ನು ನಿಮ್ಮ ಪಕ್ಷದವರು ಹುರಿದುಂಬಿಸಿದಿರಿ. ಎಲ್ಲಿದೆ ಸ್ವಾಮಿ ಅದು? ಯಾವ ಬಜೆಟ್‌ನಲ್ಲಿದೆ ಅದು? ಮೂರನೆಯದಾಗಿ, ಯುವ ವಕೀಲರಿಗೆ stipend ಕೊಡುವುದು. ಅದು ಎಲ್ಲಿದೆಯೋ? ಅದೂ ಕೂಡ ನಮಗೆ ಕಾಣುತ್ತಿಲ್ಲ. ಯಾವ್ಯಾವ ವರ್ಗಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿತ್ತೋ, ಅವರಿಗೆಲ್ಲಾ ನೀವು ಭರವಸೆ ಕೊಟ್ಟಿದ್ದಿರಿ. ಬಡವರಿಗೆ, ನಿರುದ್ಯೋಗಿ ಯುವಕರಿಗೆ, ವಕೀಲರಿಗೆ ಇವರಿಗೆಲ್ಲಾ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾಗಿತ್ತು, ಆದ್ದರಿಂದ ಅವರಿಗೆ ಭರವಸೆಗಳನ್ನು ಕೊಟ್ಟಿರಿ. ಆದರೆ ಈ ಭರವಸೆಗಳು ಪ್ರಣಾಳಿಕೆಯಲ್ಲೇ ಉಳಿದುಕೊಂಡವು. ಆದರೆ ಅನುಷ್ಠಾನದಲ್ಲಿ ಬರಲಿಲ್ಲ. ಜೊತೆಗೆ 'ತಾಯಿ ಭಾಗ್ಯ' ಸ್ಕೀಮ್ ಜಾರಿಗೆ ತಂದಿದ್ದೀರಿ. ಮೊದಲೇ 'ಮಡಿಲುಕಿ ಮತ್ತು 'ಪ್ರಕೃತಿ ಆರೈಕೆ' ಎಂಬ ಯೋಜನೆ ಇತ್ತು. ಅದನ್ನೇ ತಿರುಚಿ, 'Old wine in a new bottle with new label', ಎಂಬಂತೆ ಲೇಬಲ್ ಮಾತ್ರ ಬದಲಾಯಿಸಿ ಹೊಸದಾಗಿ ಜಾರಿಗೆ ತಂದಿದ್ದೀರಿ. ಇವರಿಗೆ ಹೇಳಿಕೊಡತಕ್ಕವರು ನಿಜವಾಗಿಯೂ ಚಾಣಾಕ್ಷರಾಗಿದ್ದಾರೆ. ಇವರೂ ಕೂಡ ಯಾವುದನ್ನು ಕೇಳಬೇಕೋ, ಅದನ್ನು ಕೇಳುತ್ತಾರೆ. ಇವರಿಗೆ ಅದರಿಂದ ಲಾಭವಾಗುವುದಿಲ್ಲ ಎಂದರೆ, ಅದನ್ನು ನಾನೇಕೆ ಮಾಡಲಿಕ್ಕೆ ಹೋಗಲಿ ಎಂದು ಅದನ್ನು ಬಿಟ್ಟು ಬಿಡುತ್ತಾರೆ. ಮೊನ್ನೆ ಎಲ್ಲೋ ಸಾವಳಗಿ ಸ್ವಾಮೀಜಿಗಳ ಹತ್ತಿರ ಹೋಗಿದ್ದೀರಿ ಎಂದು ಗೊತ್ತಾಯಿತು. 1976ರಲ್ಲಿ Educaton Minister for State ಆಗಿದ್ದಾಗ, ಆಗ Youth services and Small Scale Industries ಸಚಿವರಾಗಿದ್ದ ವಿ.ಎಸ್.ಕೌಜಲಗಿಯವರು ನನ್ನನ್ನು ಅವರಲ್ಲಿಗೆ ಕರೆದುಕೊಂಡು ಹೋಗಿದ್ದರು. ಆ ಮಠಕ್ಕೆ ಮೊನ್ನೆ ನೀವೂ ಕೂಡ ಹೋಗಿದ್ದಿರಿ ಎಂದು ಗೊತ್ತಾಯಿತು. ಇವರು ಅಲ್ಲಿಗೆ ಹೋದಾಗ, ಅಲ್ಲಿನ ಸ್ವಾಮಿಗಳು ಹೇಳಿದರಂತೆ. ಆ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಮೊನ್ನೆ ಹೇಳಿದ್ದೇನೆ. ಅವರನ್ನು ಕರೆದು 'ನೋಡಪ್ಪ, ನಿನಗೆ ಈ ಕುರ್ಚಿ ಸಿಕ್ಕಿದೆ, ಅದನ್ನು

ಸಂಬಾಳಿಸಿಕೊಂಡು ಇಟ್ಟುಕೊಳ್ಳಬೇಕು, ನೀನು ಸ್ವಲ್ಪ ಸಿಟ್ಟು ಮಾಡಿಕೊಳ್ಳುವುದನ್ನು ಬಿಟ್ಟುಬಿಡು, ಅದಕ್ಕೇ ನಿನಗೆ ಕುರ್ಚಿ ಸಿಕ್ಕಿದೆ, ನಿನಗೆ ಕುರ್ಚಿ ಬೇಕೋ? ಸಿಟ್ಟು ಬೇಕೋ? ಆಯ್ಕೆ ಮಾಡಿಕೋ' ಎಂದರಂತೆ. 'ಇಲ್ಲ ನನಗೆ ಕುರ್ಚಿಯೇ ಬೇಕು' ಎಂದು ಇವರು ಹೇಳಿ ಬಂದರಂತೆ. ಆದ್ದರಿಂದ ಇವರು ಸಿಟ್ಟು ಬಿಟ್ಟು ಕುರ್ಚಿಯನ್ನು ಹಿಡಿದುಕೊಂಡಿದ್ದಾರೆ. ನಮಗೆಲ್ಲಾ ಸಂತೋಷ. ಆದರೆ ಹೇಳಿದ್ದನ್ನಾದರೂ ಮಾಡಬೇಕಲ್ಲವೇ? ಮಾತು ಕೊಟ್ಟಿದ್ದನ್ನಾದರೂ ನಡೆಸಿಕೊಡಬೇಕಲ್ಲವೇ? 'ತಾಯಿ ಭಾಗ್ಯ', ಆಂಬುಲೆನ್ಸ್ ಒದಗಿಸುವ 'ಆರೋಗ್ಯ ಕವಚ' ಯೋಜನೆ, ಇದೆಲ್ಲಾ ನಿಮ್ಮ ದೊಡ್ಡ ದೊಡ್ಡ ಯೋಜನೆಗಳು. ಗುಲ್ಬರ್ಗಾ ಮತ್ತು ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಮಾಡುತ್ತೇವೆಂದು ಹೇಳಿದ್ದಿರಿ, ಆದರೆ ಅದು ಆಗಿಲ್ಲ. ಸತ್ಯಂ ಕಂಪೆನಿಯವರು ಅವರೂ ಮುಳುಗಿದರು, ನಮ್ಮನ್ನೂ ಮುಳುಗಿಸುತ್ತಿದ್ದಾರೆ. ಹೆಸರು ಮಾತ್ರ 'ಸತ್ಯಂ', ಉಳಿದಿದ್ದೆಲ್ಲಾ 'ಅಸತ್ಯಂ'. ಅಂತಹ ಅಸತ್ಯಂಗೆ ಇವರು ಬೆಂಬಲವನ್ನು ಕೊಟ್ಟು, ನಂಬಿ, ಇವತ್ತಿನ ದಿವಸ ಗುಲ್ಬರ್ಗಾದಲ್ಲಿ ಮತ್ತು ಶಿವಮೊಗ್ಗದಲ್ಲಿ airport ಮಾಡುತ್ತೇವೆಂದು ಹೇಳಿದ್ದರು. ಸತ್ಯಂ ಕಂಪೆನಿ ಟೋಪಿ ಕಂಪೆನಿಯಾಗಿದೆ. ಟೋಪಿ ಹಾಕುವ ಕಂಪೆನಿಗೇಕೆ ಇದನ್ನು ಕೊಟ್ಟಿರಿ? ಎಷ್ಟು ದಿವಸ ಬೇಕು ಇದಕ್ಕೆ? ಒಂದು air strip ಮಾಡುವುದಕ್ಕಾಗುವುದಿಲ್ಲವೇ? ನಮ್ಮ ರಾಯಚೂರಿನಲ್ಲಿ ಬರೇ mud roadನಲ್ಲಿ ವಿಮಾನಗಳು ಇಳಿಯುತ್ತವೆ. ನಾನು ಮೂರು ವರ್ಷದ ಹಿಂದೆ ಅಲ್ಲಿ ಇಳಿದಿದ್ದೇನೆ. ಅದು ಅಲ್ಲಿದೆ. ಅಂತಹದ್ದನ್ನು improvement ಮಾಡುವುದಕ್ಕೆ ನಿಮಗೇನು ತೊಂದರೆ? Metal road ಮೇಲೆ Second World Warನಲ್ಲಿ air strip ಮಾಡಿದ್ದಾರೆ. ಅದೇ ರೀತಿಯಾಗಿ ಕೊಪ್ಪಳದಲ್ಲಿ ಇರುವುದು ನಿಮಗೆ ಗೊತ್ತಿದೆ. ಇಂತಹವು ಅನೇಕ ಕಡೆ ಇವೆ. ಇವರು ಕನಿಷ್ಠ ಪಕ್ಷ air strip ಮಾಡಿ, ಒಂದು frequency machine ಹಾಕಿ, ಸದ್ಯಕ್ಕೆ ಯಾವುದಾದರೂ private ವಿಮಾನಗಳು ಇಳಿದುಕೊಳ್ಳುವುದಕ್ಕಾದರೂ ಅವಕಾಶ ಮಾಡಿಕೊಡಬೇಡವೇ? ಇದಕ್ಕೆ ಹೆಚ್ಚಿನ ವೆಚ್ಚವಾಗುವುದಿಲ್ಲ, hardly ಎಂದರೆ Rs. 10-20 crores ಆಗಬಹುದು. ಆ Rs. 10-20 crores ಗಳನ್ನಾದರೂ ಇವತ್ತು ಖರ್ಚು ಮಾಡುವುದಕ್ಕೆ ನಿಮಗೆ ಆಗುವುದಿಲ್ಲವೇ? ಶಿವಮೊಗ್ಗದಲ್ಲಿ ಏನು ಮಾಡಿದ್ದಾರೋ ಗೊತ್ತಿಲ್ಲ. ಎಷ್ಟು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅವರು ತೆಗೆದುಕೊಂಡಿದ್ದಾರೆ, ಯಾವ ರೀತಿಯಾಗಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಗುಲ್ಬರ್ಗಾದಲ್ಲಿ ನಾನು 500 ಎಕರೆ ಜಮೀನನ್ನು acquire ಮಾಡಿಸಿ,

consent ಮೇಲೆ ಕೊಡಿಸಿ, compound ಹಾಕಿಸಿ hand over ಮಾಡಿದ್ದೆ.

ಇವರು ಬರುತ್ತಾರೆಂದು ಫೌಂಡೇಷನ್ ಸ್ಟೋನ್ ಹಾಕುವುದಕ್ಕೆ ಕಾಂಪೌಂಡ್ ಅನ್ನು ಮೂರು ಕಡೆ ಒಡೆದರು. ಆ ಕಾಂಪೌಂಡ್ ದುರಸ್ತಿಯೂ ಇಲ್ಲ, ಆ ಗುಲ್ಬರ್ಗಾ ಏರ್‌ಪೋರ್ಟ್ ಕನ್ಸ್ಟ್ರಕ್ಷನ್ ಪ್ರಾರಂಭನೂ ಆಗಲಿಲ್ಲ. ಅದಕ್ಕೆ ಎಷ್ಟು ದಿವಸಬೇಕು? ಅದಕ್ಕೇನು ವರ್ಷಾನುಗಟ್ಟಲೆ ಬೇಕಾ? ಇವೆಲ್ಲವನ್ನೂ ಕೂಡ ಒಂದು ದೊಡ್ಡ 3 ಕಿ.ಮೀ ರಸ್ತೆ ಮಾಡಿದಂತೆ. ಪ್ರಯತ್ನ ಅದನ್ನು ಮಾಡುವುದನ್ನು ಮಾಡಲಿಲ್ಲ, ಆದರೆ ಹೇಳುವುದನ್ನು ಮಾತ್ರ ಬಿಡಲಿಲ್ಲ. ಯಾವುದನ್ನು ಮಾಡಬಹುದು, ಕೇವಲ ಸ್ವಲ್ಪ ಸಮಯದಲ್ಲಿ ಇದನ್ನು ತೆಗೆದುಕೊಳ್ಳಬಹುದು, ಅಂಥದ್ದನ್ನು ಕೂಡ ನೀವು ತೆಗೆದುಕೊಳ್ಳಲಿಲ್ಲವೆಂದರೆ, ಮೂಲಭೂತ ಸೌಕರ್ಯಕ್ಕೆ ಒತ್ತುಕೊಟ್ಟಂತೆ, ಅಭಿವೃದ್ಧಿ ಮಾಡಿದಂತೆ ಅಥವಾ ನಾನು ಬಡವರ ಪರವಾಗಿದ್ದೇನೆ, ಹಿಂದುಳಿದ ವರ್ಗದವರ ಪರವಾಗಿದ್ದೇನೆಂದು ಸುಮ್ಮನೆ ಹೇಳುತ್ತಾ ಹೋದರೆ ಅಭಿವೃದ್ಧಿ ಆದಂತೆನಾ? ಆಮೇಲೆ State Skill Commission, ಅದು ಎಲ್ಲಿದೆ? ಅದನ್ನು ಹುಡುಕಬೇಕು. ಅಧ್ಯಕ್ಷರೆ, ಅದನ್ನು ನಿಮ್ಮ ಮತಕ್ಷೇತ್ರದಲ್ಲಿ ಮಾಡಿದ್ದಾರೇನೋ ಗೊತ್ತಿಲ್ಲ, ಏಕೆಂದರೆ, ಅವರು ಕೆಲವು ಸಲ ನಿಮಗೆ ಹೆದರುತ್ತಾರೆ. ಆವಾಗಾದಾಗ ಮಾಡಿಕೊಡುತ್ತಾರೆ. ಆದರೆ, ನನಗೇನು ಕಷ್ಟವೆಂದರೆ, ನಾವು ಅವರಿಗೆ ಕೇಳುವುದು ಕಷ್ಟ, ಏನಾದರು ಕೇಳಿ ಕೊಟ್ಟರೆಂದರೆ, ಮತ್ತೆ ನಿಮಗೆ ಇದನ್ನು ಕೊಟ್ಟಿಲ್ಲವೇ ಎಂದರೆ ಏನು ಮಾಡುವುದು? ಮೊನ್ನೆ ಅದೇ ರೀತಿಯಾಗಿ ಆಯಿತಲ್ಲ. ಯಾವುದೋ ಸಣ್ಣಪುಟ್ಟ ಕೆಲಸ ಮಾಡಿ, ಅದನ್ನು ಅಣಕಿಸುವುದು ಬೇಡವೆಂದು ನಾವು ಆ ಗೋಜಿಗೆ ಹೋಗುವುದಿಲ್ಲ. ಕನಿಷ್ಠ ಪಕ್ಷ ಈ Skill Commission ಅನ್ನು ನಿಮಗಾದರು ಕೊಟ್ಟಿರಬೇಕೆಂದು ಅನಿಸುತ್ತದೆ, ತಮ್ಮಲ್ಲಿ ಬಂದಿದೆಯಾ ಸಾರ್?

ಅಧ್ಯಕ್ಷರು :- ಬಂದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರಿಗೆ ಬಂದಿಲ್ಲವೆಂದರೆ ಮತ್ತೆ ನಮ್ಮಲ್ಲಿ ಯಾರಿಗೆ ಬರುತ್ತದೆ? ಆದುದರಿಂದ ಇದನ್ನೆಲ್ಲಾ ನಾವು ಪಟ್ಟಿಯನ್ನು ಮಾಡುತ್ತಿದ್ದೇವೆ. ಆರೋಗ್ಯ ಕವಚ, ತಾಯಿಭಾಗ್ಯ, ವಕೀಲರಿಗೆ ಸ್ಟೈಪೆಂಡ್, ನಿರುದ್ಯೋಗಿಗಳಿಗೆ ಸ್ಟೈಪೆಂಡ್, ರೈತರಿಗೆ ಉಚಿತ ವಿದ್ಯುತ್ ಕೊಡುವುದು, ರೂ. 2 ಗೆ ಕೆ.ಜಿ. ಅಕ್ಕಿಯನ್ನು ಕೊಡುವುದು, ನಿಮ್ಮದೇನು ಈ ಎಲ್ಲಾ ಸಾಧನೆ? ನಿಮ್ಮ ಸಂಕಲ್ಪದ ಪ್ರಕಾರ, ನೀವು

ಮಾಡಬಾರದೆಂದು ಸಂಕಲ್ಪ ಮಾಡಿದ್ದೀರಿ, ಮಾಡಬೇಕೆಂದಿಲ್ಲ. ಮುಂದಿನ ಲೋಕಸಭೆಯ ಚುನಾವಣೆಗೆ ಈ ಹಣವನ್ನೆಲ್ಲಾ ಇಟ್ಟುಕೊಂಡು ಕಾಯುತ್ತಾ ಕುಳಿತಿದ್ದಾರೆ, ಕಾದು ನೋಡಬೇಕು. ಆಮೇಲೆ ನೀರಾವರಿಗೆ ಆದ್ಯತೆಯನ್ನು ನೀಡುವುದು. ಈ ನೀರಾವರಿಗೋಸ್ಕರ ಒಬ್ಬ ಒಳ್ಳೆಯ ವಕೀಲರನ್ನು ಹಿಡಿದಿದ್ದಾರೆ, ಯಾರೆಂದರೆ, ಬಸವರಾಜ ಬೊಮ್ಮಾಯಿ. ನೀನು ಮಾಡಪ್ಪ ವಾದ, ಹೇಳುವುದನ್ನು ಹೇಳು, ನಾನು ಇದನ್ನು ಹೇಳುತ್ತೇನೆಂದು, ಪಾಪ ವಕಾಲತ್ತನ್ನು ಅವರಿಗೆ ಹಚ್ಚಿ, ಫೀ ಇಲ್ಲದೆ ವಕಾಲತ್ತು ಮಾಡಲು ಪ್ರಾರಂಭ ಮಾಡಿದ್ದಾರೆ. ಏನೆಂದರೆ, ಅವರ ವೀರಾವೇಶವನ್ನು ನೀವು ನೋಡಿಲ್ಲ, ಹಿಂದಿನ ಸರ್ಕಾರಗಳನ್ನು ನೋಡಿ ಎನ್ನುತ್ತಾರೆ. ಹಿಂದಿನ ಸರ್ಕಾರ ನಿಮ್ಮದಿರಲಿಲ್ಲ. ನೀವು 7 ತಿಂಗಳಿನಿಂದ ಇದರಲ್ಲಿ ಪಾಲುದಾರರು. ಉಳಿದೆಲ್ಲಾ ಪಾಲುದಾರರು,ನೀವು, ಜನತಾ ಸರ್ಕಾರ ಅಥವಾ ಮೂಲ ಕಾಂಗ್ರೆಸ್. ಇದನ್ನೆಲ್ಲಾ ನೋಡಿದಾಗ, ನೀವು ಇದರಲ್ಲಿ ಪಾಲುದಾರರಾಗಿದ್ದು ಕೇವಲ 7 ತಿಂಗಳು. ಇದಕ್ಕಿಂತ ಹಿಂದೆ ನೀವೆಲ್ಲರೂ ಕೂಡ ಮತ್ತು ನಿಮ್ಮ ಆಗುಹೋಗುಗಳೆಲ್ಲಾ ಜನತಾ ಪರಿವಾರದಲ್ಲೆ ಇದ್ದಂಥವು. ಆದುದರಿಂದ ನಾವು ಹೇಳುವುದೇನೆಂದರೆ, ನೀರಾವರಿಗೆ ಆದ್ಯತೆಯನ್ನು ಕೊಡಬೇಕೆಂಬುದನ್ನು ಅವರು ಹೇಳಿದ್ದಾರೆ, ಅವರು ಹೇಳಿದಂತೆ ನಡೆದುಕೊಂಡಿದ್ದಾರೆಯೇ? ನೀವು ಬಹಿರಂಗವಾಗಿ ಇಲ್ಲಿ House ನಲ್ಲಿ ಏನು ಡಿಫೆಂಡ್ ಮಾಡಬೇಕು ಅದನ್ನು ಮಾಡಿ ಅಥವಾ ಮಾನ್ಯ ಸದಸ್ಯರುಗಳು, ನಿಮ್ಮ ಪಕ್ಷ, ಸರ್ಕಾರದ ದೃಷ್ಟಿಯಿಂದ ಡಿಫೆಂಡ್ ಮಾಡಿಕೊಳ್ಳಲಿ. ಆದರೆ ನಿಮಗೆ ಹಣ ಕಡಿಮೆ ಕೊಟ್ಟಾಗ ಖಂಡಿತವಾಗಿ ನೀವು ಮುಖ್ಯಮಂತ್ರಿಗಳಲ್ಲಿ ಕೇಳಲೇ ಬೇಕು, ಮಾತನಾಡಲೇ ಬೇಕು, ನಿಷ್ಠೂರವಾಗಲೇ ಬೇಕು. ಅದನ್ನು ಬಿಟ್ಟು, ಏನು ಅನ್ನುತ್ತಾರೋ, ನನ್ನನ್ನು ಇಲ್ಲಿ ತೆಗೆದು ಮತ್ತೊಂದು ಕಡೆ ಹಾಕುತ್ತಾರೆನೋ ಅಥವಾ ಮತ್ತೊಂದು portfolio ಬದಲಾಯಿಸುತ್ತಾರೇನೋ ಎಂದು ಈ ಒಂದು ಮುಜುಗರದಿಂದ ಕುಳಿತರೆ, ಖಂಡಿತವಾಗಿ ಆಗುವುದಿಲ್ಲ. ಮತ್ತು ಪ್ರಮುಖ ನೀರಾವರಿ ಯೋಜನೆಗಳಿರುವುದೇ ಉತ್ತರ ಕರ್ನಾಟಕದಲ್ಲಿ. ನಾವೆಲ್ಲಾ ಉತ್ತರ ಕರ್ನಾಟಕ, ಉತ್ತರ ಕರ್ನಾಟಕ ಎಂದು ಹೇಳಿಕೊಳ್ಳುತ್ತೇವೆ, ಅದು Upper Krishna Project ಇರಬಹುದು ಅಥವಾ ಅವರ ಅಧೀನದಲ್ಲಿ ಬರುವ ಅನೇಕ Bheema Lift Irrigation ಇರಬಹುದು, ಕಾರಂಜವಿರಬಹುದು, ಅಥವಾ ಈ ಕಡೆ ಇರುವ ಘಟಪ್ರಭಾ ಇರಬಹುದು, ಮಲಪ್ರಭಾವಿರಬಹುದು. ಆ ಕಡೆಯೆಲ್ಲಾ, ಹೇಮಾವತಿ, ಹಾರಂಗಿ ಮುಗಿದಿವೆ, ಕೃಷ್ಣರಾಜ ಸಾಗರವನ್ನೇನು ಆಧುನೀಕರಣ

ಮಾಡಬೇಕಾಗಿತ್ತು. ಅದನ್ನು ಕೂಡ ಮಾಡಿದ್ದಾರೆ. ಆದರೆ ಈ ಕಡೆ ಆಗಬೇಕಾಗಿರುವ ಕೆಲಸಕ್ಕೆ ಆದ್ಯತೆ ಕೊಡಲು ನಿಮ್ಮ ಕೈಯನ್ನು ಯಾರು ಕಟ್ಟಿದ್ದಾರೆ? ನಿಮ್ಮಲ್ಲೇ ಇದೆಯಲ್ಲಾ ಆದ್ಯತೆ ಕೊಡುತ್ತೇವೆಂದು. ಏನು ಆದ್ಯತೆಯನ್ನು ಕೊಟ್ಟಿದ್ದೀರಿ? Total budget allocation Rs.3595 crores, ಹೌದಾ? ಅದರಲ್ಲಿ ಇಲ್ಲಿಯವರೆಗೆ ರಿಲೀಸ್ ಆಗಿದ್ದು, Rs.1498 Crores till November, 2008 about 30%. ಹೌದಾ? ಇದರಲ್ಲಿ ಬಡ್ಡಿಗೆ ಎಷ್ಟು ಹೋಗಿದೆಯೋ? ಅಥವಾ Physical target achieve ಮಾಡುವುದಕ್ಕೆ ನೀವು ಎಷ್ಟು ಖರ್ಚು ಮಾಡಿದ್ದೀರೆನ್ನುವುದನ್ನು ಹೇಳಬೇಕು. ಅನೇಕ ಸಾರಿ, ಮೈನರ್ ಇರಿಗೇಷನಲ್ಲೂ ಕೂಡ total allocation Rs.772 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಬಿಡುಗಡೆಯಾದ ಹಣ, 140 ಕೋಟಿ ರೂಪಾಯಿಗಳು ಮಾತ್ರ, ಅಂದರೆ 21%. ಈಗಾ ತಾವು, ಬಹಳ ಜನ ಆ ಕಡೆ ಮಾತನಾಡಿದರಲ್ಲ. ಹೇಳಿ ಸರ್, ಮೇಜನ್ನು ಬಡಿದಿದ್ದೇ ಬಡಿದಿದ್ದು. ರೈತರ ಪರ, ರೈತರ ಹೆಸರಿನಲ್ಲಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ ಮುಖ್ಯಮಂತ್ರಿಗಳು ಕೇವಲ 30% ಇಲ್ಲಿಯವರೆಗೆ ನೀರಾವರಿಗೆ ಹಣ ಬಿಡುಗಡೆ ಮಾಡಿದ್ದಾರೆ. ಆಮೇಲೆ ಸಣ್ಣ ನೀರಾವರಿಗೆ ಕೇವಲ 772 ಕೋಟಿಯಲ್ಲಿ 140 ಕೋಟಿ ರೂಪಾಯಿಗಳನ್ನು, 21% ಮಾತ್ರ ಬಿಡುಗಡೆ ಮಾಡಿದ್ದಾರೆ. ಮೇಜನ್ನು ಕುಟ್ಟಿ, ಸರ್, ಇಷ್ಟೂ ಕೊಡದಿದ್ದರೆ ಏನು ಮಾಡುತ್ತಿದ್ದೀರಿ? ಫೀ ಇಲ್ಲದೆ ಒಳ್ಳೆಯ ವಕೀಲರನ್ನು ಇಟ್ಟಿದ್ದಾರೆ ಎಂದು ನಾನು ಮೊದಲೇ ಹೇಳಿದ್ದೇನೆ. ಅದಕ್ಕೆ ಅವರ ಪರವಾಗಿ ನೀವು ವಕಾಲತ್ತು ಮಾಡುತ್ತೀರಿ, ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ನೀವು ಶಾಸಕರಿಗೆ ಹೇಳಿದರಲ್ಲ, ಅದಕ್ಕೆ ಹೇಳುತ್ತೇನೆ, ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- If they are hurt, I will withdraw.

ಶ್ರೀ ಬಸವರಾಜ ಬೊಮ್ಮಾಯಿ :- No, I don't mean that. ನಿಮ್ಮ ಟೀಕೆಯನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುತ್ತೇವೆ, ಆ ಪ್ರಶ್ನೆಯೇ ಇಲ್ಲ, ಒಂದು ನಿಮಿಷ ಅವಕಾಶ ಕೊಟ್ಟರೆ ಹೇಳುತ್ತೇನೆ, ನಿಮ್ಮ ಹತ್ತಿರ ನಾನು ವಾದ ಮಾಡುವುದಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು, ನಮ್ಮ ಹಣಕಾಸಿನ ಬಿಡುಗಡೆಯ ಬಗ್ಗೆ ಅವರೇನು ಹೇಳಿದ್ದಾರೆ ಅವರ ಬಗ್ಗೆ ಒಂದು ಸಣ್ಣ

clarification ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ಒಟ್ಟು, ನಮಗೆ 3,681 ಕೋಟಿ ರೂಪಾಯಿಗಳಿದ್ದು, ಅದರಲ್ಲಿ ನೇರವಾಗಿ ವರ್ಕ್ಸ್‌ಗೆ 3017 ಕೋಟಿ. ಅಂದರೆ ಒಟ್ಟು ಅಲೋಕೇಷನ್‌ನಲ್ಲಿ 81.88 ವರ್ಕ್ಸ್‌ಗೆ, ಸುಮ್ಮನೆ ಹಾಗೆ ಕಂಪೇರ್ ಮಾಡಿದೆ. ನೀವೂ ಕೂಡ ಉತ್ತರವನ್ನು ಕೊಡುವಾಗ ಕಡತ ತೆಗೆದು ಹಿಂದಿನದನ್ನು ನೋಡಿ ಮುಂದಿನದನ್ನು ಹೇಳಿದ್ದೀರಿ, 2005-06ರಲ್ಲಿ ಒಟ್ಟು ಬಜೆಟ್‌ನಲ್ಲಿ ಕೇವಲ 53% ಮಾತ್ರ ವರ್ಕ್ಸ್‌ಗೆ ಇತ್ತು. 2006-07ರಲ್ಲಿ 66%, ಈ ಸಾರಿ 81.98%, ಅಂದರೆ 3017 ಕೋಟಿ ರೂಪಾಯಿಗಳು ವರ್ಕ್ಸ್ ಆಗಿದೆ. ಇಲ್ಲಿಯವರೆಗೆ 1720 ಕೋಟಿ ರೂಪಾಯಿಗಳು ರಿಲೀಸ್ ಆಗಿದೆ, ಅಂದರೆ, 55% ಈಗಾಗಲೇ ರಿಲೀಸ್ ಆಗಿದೆ. ಮತ್ತೆ ಏಕೆ ಕಮ್ಮಿಯಾಗಿದೆ ಎನ್ನುವುದನ್ನು ಹೇಳುತ್ತೇನೆ. ಮೊದಲನೆ 4 ತಿಂಗಳು ಚುನಾವಣೆ ಇತ್ತು, ರಾಜ್ಯಪಾಲರ ಆಳ್ವಿಕೆ ಇತ್ತು, ಮೊದಲನೆ 4-5 ತಿಂಗಳು ಖರ್ಚಾಗಿರಲಿಲ್ಲ, ನಮ್ಮ ಬಜೆಟ್ ಅಕೌಂಟ್‌ಗೆ ಆಗಸ್ಟ್ ನಂತರ ಬಂದಿದೆ. ಈ ಕ್ಲಾರಿಫಿಕೇಷನ್ ಕೊಡುತ್ತೇನೆ. ಮೊದಲನೆ 4-5 ತಿಂಗಳು ಕೆಲಸವಾಗಿರಲಿಲ್ಲ. ನಾವು ಆಗಸ್ಟ್ ನಲ್ಲಿ ಬಜೆಟ್ ಮಂಡನೆ ಮಾಡಿದ ಮೇಲೆ ಖರ್ಚಾಗಿದೆ. ಆದುದರಿಂದ 4 ತಿಂಗಳು ವಜಾ ಮಾಡಿದರೆ, ಕೇವಲ 6 ತಿಂಗಳಲ್ಲಿ ಇಷ್ಟು ಖರ್ಚಾಗಿದೆ 55%.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇದು ನಿಮ್ಮ ವಾದ. ನನ್ನ ಬಳಿ ಬುಕ್‌ನಲ್ಲಿ ಇರತಕ್ಕಂಥದ್ದು ನಾನು ಹೇಳುತ್ತಿದ್ದೇನೆ. Rs. 3595.52 crores. ಈಗ 3,595 ಕೋಟಿಯಲ್ಲಿ ಖರ್ಚಾಗಿದ್ದು ಆರ್ಥಿಕ ಇಲಾಖೆಯಿಂದ ನಾವು ತೆಗೆದುಕೊಂಡಂತಹ document ಪ್ರಕಾರ Rs. 1,498 crores ಇದು ರಿಲೀಸ್ ಆಗಿದ್ದು November end ವರೆಗೆ. Minor Irrigation ನಲ್ಲಿ Rs. 772 croresನಲ್ಲಿ 140 crores ಅಂದರೆ ಅದರಲ್ಲಿ about 21% ಖರ್ಚಾಗಿದೆ ಎನ್ನತಕ್ಕಂಥದ್ದು ಇದೆ. ಅದೇ ರೀತಿಯಾಗಿ Power Generation ನಲ್ಲಿ out of Rs.488 crore only Rs.175 crore has been released. It is about 30%. ಇದು figures ಇರತಕ್ಕಂಥದ್ದು. ಇದಕ್ಕೆ ಅವರು deny ಮಾಡಲಿ. ಏನಾದರೂ ಹೇಳಿಕೊಳ್ಳಲಿ ಇದು ಒಂದು. Rs. 3595 ಅಥವಾ Rs. 3600 crores ನಲ್ಲಿ ವರ್ಕ್‌ಗೆ ಎಷ್ಟು ಇಟ್ಟಿದ್ದೀರಿ ಎಂದಿರಿ: . .

ಶ್ರೀ ಬಸವರಾಜ ಬೊಮ್ಮಾಯಿ :- ಮಾನ್ಯ ಅಧ್ಯಕ್ಷರೆ, Rs. 3681 crores ನಲ್ಲಿ 3017 crores ವರ್ಕ್ಸ್‌ಗಳಿಗಾಗಿ ಇಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಹೇಳಿದರೆ ನೀವು ತಪ್ಪು ತಿಳಿದುಕೊಳ್ಳುತ್ತೀರಿ, ಅವರೂ ತಪ್ಪು ತಿಳಿದುಕೊಳ್ಳುತ್ತಾರೆ. 2800ಕೋಟಿ ರೂಪಾಯಿಗಳನ್ನು ಹಿಂದಿನ ಸರ್ಕಾರಗಳು ಇಟ್ಟಿದ್ದವು. ಇವತ್ತು ನೀವು ಈ ಕಾಲದಲ್ಲಿ ಇಟ್ಟಿರುವುದು 3017 ಕೋಟಿ ರೂಪಾಯಿಗಳು. Steel rate ಏನಿದೆ? cement rate ಏನಿದೆ? Jelly rate ಏನಿದೆ? ಅದು ನಿಮ್ಮ financial target ಗೆ ನಿಮ್ಮ physical target ಗೆ equal ಆಗುತ್ತದಾ? ಅಥವಾ ನಮ್ಮ physical target ಹೆಚ್ಚಿಗೆ ಆಗುತ್ತದೋ, ನಿಮ್ಮದು ಆಗುತ್ತದೋ ನೀವೇ ಹೇಳಿ. ಉದಾಹರಣೆಗೆ ಹೇಳುತ್ತೇನೆ, ನಾವು ಇವತ್ತು 10 ಲಕ್ಷ ರೂ.ಗಳಲ್ಲಿ ಕಟ್ಟುವಂತಹ ಮನೆ ಹಿಂದೆ ಏಳು ಲಕ್ಷ ರೂ.ಗಳಲ್ಲಿ ಕಟ್ಟಬಹುದಾಗಿತ್ತು. ಯಾವ ಡ್ಯಾಂ ನಾವು ಇವತ್ತು 10 ಕೋಟಿ ರೂ.ಗಳಲ್ಲಿ ಮಾಡಬಹುದೋ ಹಿಂದೆ ಅದನ್ನು 7 ಕೋಟಿ ರೂ.ಗಳಲ್ಲಿ ಮಾಡಬಹುದಾಗಿತ್ತು. ಏಕೆಂದರೆ steel rate, cement rate, jelly rate, ಮತ್ತು labour rate ಕಡಿಮೆ ಇತ್ತು. ಅದನ್ನು ಲೆಕ್ಕ ಹಾಕಿ ಹೇಳಿ. Cost escalation the prices + your budget. Don't go. Just ನೋಟಿನ ಮೇಲೆ ಹೋಗಬೇಡಿ. ಅದನ್ನು ಹೇಳಿದ ತಕ್ಷಣ ಪಾಪ ಅವರು ಟೇಬಲ್ ಬಡಿದರು. ಈಗ ಇನ್ನೊಮ್ಮೆ ಬಡಿಯಿರಿ ಬೇಕಾದರೆ.

ಶ್ರೀ ಬಸವರಾಜ ಬೊಮ್ಮಾಯಿ :- Inflation ಗೆ ನೀವು ಎಷ್ಟು ತೆಗೆದುಕೊಳ್ಳುತ್ತೀರಿ? ನಿಮ್ಮ ಕೇಂದ್ರ ಸರ್ಕಾರದ ಫಿಗರ್‌ಗಳು ಎಷ್ಟು ಇವೆ? In fact steel, ಸಿಮೆಂಟ್ ಈಗ ಕಡಿಮೆ ಆಗಿದೆ. ಎರಡು ವರ್ಷಗಳಿಂದ ಈಗ ಮೂರು ತಿಂಗಳುಗಳಲ್ಲಿ ಕಡಿಮೆ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವೇ ಗೌರ್ನಮೆಂಟ್ ನಿಂದ ಬೇಕಾದರೆ ಎಲ್ಲಾ ಕಂಟ್ರ್ಯಾಕ್ಟ್ ತೆಗೆದುಕೊಂಡು ಮಾಡಿ. ನಾವು ಬೇಡವೆಂದು ಹೇಳುವುದಿಲ್ಲ. ನಾನು ಹೇಳುವುದೇನೆಂದರೆ, See allocation...

ಡಾ॥ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನನಗೆ ಏನೆಂದರೆ, ನಾವು ಏನಾದರೂ ಐದು ವರ್ಷ ಅವಧಿ ಪೂರ್ಣ ಮಾಡಿ ಮಾತನಾಡುವಂತಹ ಕಾಲದಲ್ಲಿ ಏನು ಮಾತನಾಡಬೇಕೆಂದು ಯೋಚನೆ ಮಾಡಿದ್ದೀರೋ, ಅಡ್ವಾನ್ಸ್ ಆಗಿ ಮಾತನಾಡುತ್ತಿದ್ದೀರಿ. ನಾವು ಅಧಿಕಾರಕ್ಕೆ ಬಂದು ಎಂಟು ತಿಂಗಳಾಯಿತು. ನಾನು

ಹಿಂದಿನ ಯಾವುದೇ ಮುಖ್ಯಮಂತ್ರಿಗಳು ಸಾಧನೆ ಮಾಡಲಿಲ್ಲವೆಂದು ಹೇಳಲಿಲ್ಲ. ಮಾಡಿದ್ದೀರಿ. ಆದರೆ ಜನರ ನಿರೀಕ್ಷೆಯಷ್ಟು ಮಾಡಿಲ್ಲವೆಂದು ಒಂದೇ ಮಾತಿನಲ್ಲಿ ಹೇಳಿದ್ದೇವೆ. ನಮ್ಮನ್ನು ಯಾವಾಗ ನೀವು ಅಳೆಯಬೇಕು, ನಮ್ಮ ಅವಧಿ ಮುಗಿದ ಮೇಲೆ. ಯಡಿಯೂರಪ್ಪನವರೇ ಹೀಗೆ ಹೇಳಿದ್ದೀರಿ, ಹೀಗೆ ಮಾಡಿದ್ದೀರಿ, ಎಂದು ನೀವು ಕೇಳಬೇಕಾದುದು ಸರಿ ಇದೆ. ಮೊನ್ನೆ ವಿಧಾನಸಭಾ ಚುನಾವಣೆ ಏನಾಯಿತು? ನಾನು ಮಾಡಿದ ಸಾಧನೆಗೆ ತಾನೆ ಐದು ಸೀಟ್ ಗೆದ್ದಿದ್ದು? ಹಾಗೆ ಕಣ್ಣು ಮುಚ್ಚಿಕೊಂಡು ಜನ ಓಟು ಕೊಟ್ಟರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ನೋಡಿದ್ದೇನೆ. ನಿಮ್ಮ 18 ಸೀಟ್ ಬಂದಿದ್ದೂ ನೋಡಿದ್ದೇನೆ, ವಿಧಾನಸಭೆಯಲ್ಲಿ ನೀವು ಇಬ್ಬರೇ ಕುಳಿತಿದ್ದೂ ನೋಡಿದ್ದೇನೆ, 40 ಸೀಟು ಬಂದಿದ್ದೂ ನೋಡಿದ್ದೇನೆ. ನಾನು ಮತ್ತೆ ನಾಲ್ಕು ಸೀಟು ಗೆದ್ದು Opposition Leader ಆಗಿದ್ದೂ ನೋಡಿದ್ದೇನೆ. ನಮ್ಮ ಇಬ್ಬರ ಸೀಟೂ ಬದಲಾವಣೆ ಆಯಿತು. ಸುಮ್ಮನೆ ಜಂಬ ಕೊಚ್ಚಿಕೊಳ್ಳಬೇಡಿ. ದುಡ್ಡು ನಿಮ್ಮ ಅಧಿಕಾರದ ಬಲ, ತೋಳು ಬಲ ಇದೆಲ್ಲ ನಿಮಗೆ ಐದು ಸೀಟು ತಂದಿತು. ಇರಲಿ. ಅದು ಹೇಗೆ ಬಂದಿರಿ ಎಂದು ಇತಿಹಾಸ ಇದೆ. ಏಳು ಮತ ಕ್ಷೇತ್ರಗಳಲ್ಲಿ ಏನು discretionary quota amount ಕೊಟ್ಟಿರಿ, ಹೇಗ್ಹೇಗೆ ಅದು ದುರುಪಯೋಗ ಆಯಿತು, ಯಾವ ರೀತಿ ವೋಟಿಗೋಸ್ಕರ ಅದನ್ನು ಖರ್ಚು ಮಾಡಿದಿರಿ ಎಂದು ಇಲ್ಲಿ ಎಲ್ಲರಿಗೂ ಕೂಡ ಗೊತ್ತಿದೆ. ನಿನ್ನೆ ಪುನಃ ನೀವೇ ಮದ್ದೂರಿಗೆ ಇಲ್ಲ ಏಳು ಕೋಟಿ ರೂ. ನಾವು ಕೊಡುತ್ತೇವೆ ಎಂದು ಒಪ್ಪಿಕೊಂಡಿರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನೀರಾವರಿಗೆ ಆದ್ಯತೆ ಕೊಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ಹೊರತಾಗಿ ನೀವು ಕಡಿಮೆ ಕೊಟ್ಟಿರಿ, ನಾವು ಹೆಚ್ಚಿಗೆ ಕೊಟ್ಟೆವು ಎಂದು ಹೇಳುತ್ತಿಲ್ಲ. ಯಾವ ನೀರಾವರಿಗೆ ನೀವು ಆದ್ಯತೆ ಕೊಡಬೇಕು? ರೈತರ ಪ್ರಶ್ನೆ ಬಂದಾಗ ರೈತರಿಗೆ ಖುಷಿ ಪಡಿಸತಕ್ಕಂಥದ್ದು ಅವರ ಅಭಿವೃದ್ಧಿ ಮಾಡತಕ್ಕಂಥದ್ದು ಆರ್ಥಿಕವಾಗಿ ಬಲಪಡಿಸತಕ್ಕಂಥದ್ದು ಯಾವ ಕ್ಷೇತ್ರದಲ್ಲಿ ಹೇಳಿ. ಸಣ್ಣ ನೀರಾವರಿ ಕ್ಷೇತ್ರ ತಾನೆ? ಅದಕ್ಕೇ ನೀವು ಹೆಚ್ಚಿನ ಹಣವನ್ನು ಕೊಡಲಿಲ್ಲವೆಂದರೆ, ನೀವು ರೈತರ ಪರ ಇದ್ದೀರಿ ಎಂದು ನಾನು ಹೇಗೆ ಹೇಳಬೇಕು? ಈ ಅಂಕಿ ಅಂಶವೇ ಪ್ರೂವ್ ಮಾಡುತ್ತದಲ್ಲಾ? ಅದಕ್ಕಾಗಿ ಅನೇಕ ಸಾರಿ ನಾವು ಹೇಳಿದ್ದೇವೆ. ನಮ್ಮ total budget ನಲ್ಲಿ ಹಿಂದಿನ ಸರ್ಕಾರಗಳು allocation ಮಾಡುವಾಗ 33% ,27%, 25% ವರೆಗೆ ಮಾಡಿದರೆ ನೀವು ಅದನ್ನು ತಂದು

17%ಗೆ ನಿಲ್ಲಿಸಿದಿರಿ. ಅದನ್ನು ನೀವು ಸಮರ್ಥವಾಗಿ ಹೇಳಬಹುದು. ಹೇಗೆಂದರೆ, ನಿಮ್ಮ ಬಡ್ಡಿ 800 ಕೋಟಿ ರೂ. ಹೋಯಿತು, ನಿಮ್ಮ ಬಳಿ 280 ಕೋಟಿ ರೂ. ಉಳಿಯಿತು, ಹೌದು ಉಳಿಯಿತು. 2800 crores ನಲ್ಲಿ ನಾವು physical work ಏನು turn out ಮಾಡುತ್ತೇವೆ, ಅಷ್ಟು ನೀವು 3,000 ಕೋಟಿ ರೂ. ಇಟ್ಟರೂ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ರೇಟ್‌ನಲ್ಲಿ 4,000 ಕೋಟಿ ರೂ. ಬೇಕಾಗುತ್ತದೆ. ನೀವು 4,000 ಕೋಟಿ ರೂ. ಕೊಡಿಸಿ ಅವರಿಂದ ಶಹಭಾಸ್‌ಗಿರಿ ಪಡೆದಿದ್ದರೆ ನಾನು ಒಪ್ಪಬಹುದಿತ್ತು. ಆದರೆ ಒಂದು 200 ಕೋಟಿ ರೂ. ನಮ್ಮದು ನಿಮಗಿಂತ ಜಾಸ್ತಿ ಇದೆ ಎಂದು ಹೇಳಿ ನೀವು ಜಂಬ ಕೊಚ್ಚಿಕೊಂಡರೆ ಅದು ರೈತರಿಗೆ ಪ್ರಯೋಜನವಾಗುವುದಿಲ್ಲ. ಉತ್ತರ ಕರ್ನಾಟಕದ ಭಾಗದ ಜನರಿಗೆ ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ರೈತರು ಈ ಬಜೆಟ್ ನೋಡಿದ ಮೇಲೆ realize ಮಾಡುತ್ತಿದ್ದಾರೆ. ಯಡಿಯೂರಪ್ಪನವರು ನಮಗೆ ಏನು ಮೋಸ ಮಾಡಿದರು! ಇವರು ಹೇಳುವುದು ಒಂದು, ಮಾಡುವುದು ಒಂದು, ಇವರು ಕನಿಷ್ಠ ಬಜೆಟ್‌ನಲ್ಲಾದರೂ ಇಡಬಹುದಾಗಿತ್ತು ಎಂದು. ಇದು ಒಂದು. ಎರಡನೆಯದಾಗಿ comparative ಒಂದೆರಡು figures ಕೊಟ್ಟರು. ನಾನು ಕೂಡ ನಿಮ್ಮ ಮುಂದೆ ಹೇಳುತ್ತೇನೆ. ಹಿಂದೆ 2005-06 ರಲ್ಲಿ Rs. 3564 croresನಲ್ಲಿ ನಿಮ್ಮ debt repayment Rs. 1656 crores ಇತ್ತು. ಅಂದರೆ, more than Rs. 2500 crores for development. ಅದೇ ರೀತಿಯಾಗಿ 2006-07 ತೆಗೆದುಕೊಳ್ಳಿ, ನಂತರ 2007-08 ತೆಗೆದುಕೊಳ್ಳಿ, ಕಡಿಮೆ ಆಗಿದೆ. ನಂತರ ಇವತ್ತು ನೀವು ನೋಡುವಾಗ ನಿಜವಾಗಿಯೂ ಅತ್ಯಂತ ಕಡಿಮೆ ಬಜೆಟನ್ನು ನೀರಾವರಿಗೆ ತಾವು ಇಟ್ಟಿದ್ದೀರಿ. ಅದರಲ್ಲಿ ಸಣ್ಣ ನೀರಾವರಿಗೆ ಹೆಚ್ಚಿನ ಹಣ ತೋರಿಸಿದ್ದೀರಿ. Rs. 772 crores ಅನೇಕ ಜನ ಪಾಪ ಕೆರೆಗಳನ್ನು ಮಾಡಬೇಕು, ಅದು ಮಾಡಬೇಕು, ಇದು ಮಾಡಬೇಕು ಅಂತ ಹೇಳಿ, ಇಲ್ಲಿ ಸಾಕಷ್ಟು ಬೇಡಿಕೆ ಬಂದಿತು. ಅಧ್ಯಕ್ಷರೆ ತಮ್ಮ ಮತ ಕ್ಷೇತ್ರದಲ್ಲಿಯೂ ಇದು ಆಗಬೇಕೆಂದು ನೀವು ಯಾರಿಗೋ ಎಬ್ಬಿಸಿ ಎಬ್ಬಿಸಿ ಕೇಳಿಸುತ್ತಿದ್ದಿರಿ.

ಅಧ್ಯಕ್ಷರು :- ಅವರ ಕ್ಷೇತ್ರದ ಸಮಸ್ಯೆ ಇದೆ ಎಂದು ಅವರು ಎದ್ದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- 772ಕೋಟಿ ರೂ.ಗಳಲ್ಲಿ 140 ಕೋಟಿ ರೂ. ಬಿಡುಗಡೆ ಆದರೆ, ಈಗ ಎರಡು ತಿಂಗಳಲ್ಲಿ ನೀವು entire 500 ಕೋಟಿ ರೂ.ನೂ ಬಿಡುಗಡೆ ಮಾಡುತ್ತೀರಿ ಅಂದುಕೊಳ್ಳಿ ಕೆಲಸ ಆದ ಹಾಗೆ ಆಗುತ್ತದೆಯಾ?

ಸಾಧ್ಯವಾ? ಈ ಎಲ್ಲಾ ಪ್ರಶ್ನೆಗಳು ನಮ್ಮ ಮುಂದೆ ಇವೆ. ಆದರೂ ಕೂಡ ನಾವು ಹೆಚ್ಚಿನ ಕೆಲಸ ಮಾಡಿದ್ದೇವೆ, ನಿಮ್ಮ ಕೈಯಲ್ಲಿ ಇದ್ದದ್ದನ್ನು ನಾನು ಹೇಳುತ್ತೇನೆ. ಇಲ್ಲದೇ ಇರುವುದು ಬಿಟ್ಟು ಬಿಡೋಣ. ಇವತ್ತಿನ ದಿವಸ ಯಾವ ಯಾವ ಕ್ಷೇತ್ರದಲ್ಲಿ ಅಥವಾ ಯಾವ ಯಾವ ಇಲಾಖೆಯಲ್ಲಿ ಕೊರತೆ ಇದೆ, ಏಕೆ ಕೊರತೆ ಇದೆ, ಏನು ಕೊರತೆ ಇದೆ ಎಂಬುದರ ಬಗ್ಗೆ ನೀವು ಮೀಟಿಂಗ್ ಕರೆದು review ಮಾಡಿ. ಇದರಿಂದ ಎರಡೇ ಅರ್ಥವಾಗುತ್ತದೆ. ನೀವು ಬಜೆಟ್‌ನಲ್ಲಿ ಹಣ ಹೆಚ್ಚಿಗೆ ತೋರಿಸಿರಬಹುದು. ಆದರೆ ಬಿಡುಗಡೆ ಮಾಡುವಾಗ ಕಡಿಮೆ ಹಣ ಬಿಡುಗಡೆ ಮಾಡಿದರೆ, ಅಭಿವೃದ್ಧಿ ಎಲ್ಲಿ ಆಗುತ್ತದೆ? ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಸೇವಿಂಗ್ಸ್ ಮಾಡಿಕೊಂಡು ಫೆಬ್ರವರಿ ತಿಂಗಳಲ್ಲಿ ಎರಡು ರೂ. ಕೆ.ಜಿ. ಅಕ್ಕಿ ಕೊಡುವುದಕ್ಕೆ 19 ನೇ ತಾರೀಖು ತಯಾರಿ ನಡೆದಿದೆ. ಬಹುಶ: ಅದೇ ಇರಬಹುದು. ಬೇರೆ ಪ್ರಶ್ನೆಯೇ ಇಲ್ಲ. ಅಭಿವೃದ್ಧಿ ಮಾಡಬೇಕು ಎನ್ನತಕ್ಕಂತಹ ವ್ಯಕ್ತಿ monthly release ಮಾಡಿಕೊಂಡು monthly target fix ಮಾಡಿಕೊಂಡು monthly review ಮಾಡುತ್ತಾರೆ. ನೀವು ಮಾಡುತ್ತಿದ್ದೀರಾ? ನಿಮ್ಮ ಸರ್ಕಾರ ಮಾಡುತ್ತಿದ್ದೆಯಾ? ಎಷ್ಟು ಎಕರೆ ನೀರಾವರಿ achieve ಮಾಡಿದ್ದೀರಿ? ಇದು ಒಂದು ಕಡೆ. ಸರ್ಕಾರೀ ಅಧಿಕಾರಿಗಳ ವರ್ಗಾವಣೆ. ಯಾವ ಸರ್ಕಾರದಲ್ಲಿಯೂ ಕೂಡ ಇಷ್ಟೊಂದು ವರ್ಗಾವಣೆಗಳು ನಡೆದಿಲ್ಲ. ನಾನೂ ಕೂಡ ಸುಮಾರು ಐದು ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿದ್ದೆ. First one year ಯಾವ ಅಧಿಕಾರಿಗಳು ಇದ್ದರು ಅವರನ್ನೇ ಮುಂದುವರೆಸಿದ್ದೇವೆ ಹೊರತು ವರ್ಗಾವಣೆ ಮಾಡುವುದಕ್ಕೆ ಹೋಗಲಿಲ್ಲ. ಅವರೆಲ್ಲಾ ಜನತಾ ಸರ್ಕಾರದ ಕಾಲದಲ್ಲಿ ಪೋಸ್ಟಿಂಗ್ ಆದ ಅಧಿಕಾರಿಗಳು.

ಆದರೆ, ಈಗ ನಾನು ನೋಡಿದೆ. ಯಾವ ರೀತಿಯಾಗಿ ಟ್ರಾನ್ಸ್‌ಫರ್ ಮಾಡಿದ್ದಾರೆಂದರೆ, out of 7,800 PSIs, 5,850 transferred. ಮುಖ್ಯಮಂತ್ರಿಗಳೆ, ಇದನ್ನು ತಾವು ಕೇಳುವುದಿಲ್ಲವೇ? Out of 7800 PSIs, 5850 transferred, out of 1,220 Circle Inspectors, 820 transferred, out of 625 Dy.SPs, 425 transferred, out of 40 Additional SPs, 28 transferred. ಇದು ಆರು ತಿಂಗಳಿನ ಕರಾಮತ್ತು. ಕೇವಲ ಆರು ತಿಂಗಳಿನಲ್ಲಿಯೇ ಇಷ್ಟು ವರ್ಗಾವಣೆಗಳು ಜರುಗಿದೆ. ತಮಗೆ ಇದಕ್ಕೆ ಟೈಮ್ ಸಿಕ್ಕಿತು. ಟ್ರಾನ್ಸ್‌ಫರ್‌ಗೆ ಸಂಬಂಧಿಸಿದಂತೆ ಅಭಿವೃದ್ಧಿ ಚೆನ್ನಾಗಿ ಆಗಿದೆ. ಅನಂತರ, out of

5500 transfers, out of 68 SPs, 38 transferred, 128 IAS and 560 KAS Officers transferred. 400 Motor Vehicle Inspectors transferred, 40 RTOs transferred, 560 Commercial Tax Inspectors transferred. This is the biggest achievement of this Government. ಇಂಜಿನಿಯರುಗಳ ಟ್ರಾನ್ಸ್‌ಫರ್ಸ್ ಬಿಟ್ಟುಬಿಡಿ. ಆರು ತಿಂಗಳೊಳಗೆ ನಿಮಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಪುರುಸೊತ್ತು ಸಿಗುತ್ತದೆ, ಡೆವಲಪ್‌ಮೆಂಟ್ ಮಾಡುವುದಕ್ಕೆ ಪುರುಸೊತ್ತು ಸಿಗುವುದಿಲ್ಲವೇ? ರಿವ್ಯೂ ಮಾಡುವುದಕ್ಕೆ ಟೈಮ್ ಸಿಗುವುದಿಲ್ಲವೇ? ಅಥವಾ ನಿಮ್ಮ ಟಾರ್ಗೆಟ್ ಅಚೀವ್ ಮಾಡುವುದಕ್ಕೆ ಟೈಮ್ ಸಿಗುವುದಿಲ್ಲವೇ? ಇವು ನಿಮ್ಮ ಸಾಧನೆಗಳು!

ಇದರ ಜೊತೆಯಲ್ಲಿ ಹಿಂದಿನವರು ಒಂದೆರಡು ವರ್ಷಗಳಲ್ಲಿ ಏನು ಟ್ರಾನ್ಸ್‌ಫರ್ ಮಾಡಿದ್ದಾರೆ, ಅದರ ನಾಲ್ಕು ಪಟ್ಟು ಟ್ರಾನ್ಸ್‌ಫರ್‌ಗಳನ್ನು ಇವರು ಆರು ತಿಂಗಳಿನಲ್ಲಿಯೇ ಮಾಡಿದ್ದಾರೆ. ಮತ್ತು ನೀವು ಯಾರನ್ನಾದರೂ ಕೇಳಿ. ನಾನು ನೇರವಾಗಿ ನಿಮ್ಮ ಮೇಲೆ ಆಪಾದನೆ ಮಾಡುತ್ತೇನೆಂದು ತಾವು ತಿಳಿದುಕೊಳ್ಳಬಾರದು. ಆದರೆ, ಇದು ಮನೆ ಮಾತಾಗಿದೆ. ದುಡ್ಡು ಕೊಟ್ಟರೆ ಟ್ರಾನ್ಸ್‌ಫರ್, ಇಲ್ಲದಿದ್ದರೆ, ಇಲ್ಲ. ಪೊಲೀಸ್ ಇಲಾಖೆಯಲ್ಲಿ ಹಿಂದೆ ಬಹಳ ಕೇರ್‌ಫುಲ್ ಆಗಿ ಟ್ರಾನ್ಸ್‌ಫರ್ ಮಾಡುತ್ತಿದ್ದರು. ಯಾವಾಗಲೂ ಅವರ antecedent ನೋಡಿ, ಮೂರು ಜನರ ಪ್ಯಾನೆಲ್ ತೆಗೆದುಕೊಂಡು, ಇವರು ಸರಿಯಿಲ್ಲವೆಂದರೆ, ಕ್ಯಾನ್ಸಲ್ ಮಾಡಿ ಮತ್ತೊಬ್ಬರನ್ನು ಹಾಕುವಂತಹ ಪದ್ಧತಿ ಇತ್ತು. ಹಿಂದಿನ ಟ್ರಾನ್ಸ್‌ಫರ್‌ನಲ್ಲಿ ಯಾರೂ ದುಡ್ಡು ತಿಂದಿಲ್ಲವೆಂದಲ್ಲ, ಮಾಡಿದ್ದಾರೆ. ಆದರೆ, ಮುಂಜಾನೆಯಿಂದ ಸಂಜೆ ತನಕವೂ ಇದನ್ನೇ ಮಾಡಿ, ಇದನ್ನೊಂದು ದೊಡ್ಡ ದಂಧೆಯನ್ನಾಗಿ ಮಾಡಿದ್ದಾರೆ. ನಿಮ್ಮ ಡಿಜಿಪಿ ಏನಿದ್ದಾರೆ, ನಿಮ್ಮ ಕಾಲದಲ್ಲಿ ಏನಾಗಿದೆ, ನಮ್ಮ ಕಾಲದಲ್ಲಿ ಏನಾಗಿದೆ ಎಂಬುದನ್ನು ನೋಡಿ.

ಶ್ರೀ ಬಸವರಾಜ ಬೊಮ್ಮಾಯಿ :- ಒಟ್ಟಾರೆ, ನಿಮ್ಮ ದಾಖಲೆಯನ್ನು ಯಾರೂ ಮುರಿಯಲು ಸಾಧ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನನ್ನ ದಾಖಲೆಯೇ ಇರಲಿ, ನನ್ನಪ್ಪನ ದಾಖಲೆಯೇ ಇರಲಿ. ಯಾವುದೇ ಎನ್‌ಕ್ವೈರಿಯಾದರೂ ನಾನು ರೆಡಿ ಇದ್ದೇನೆ, ಬನ್ನಿ.

ಶ್ರೀ ಬಸವರಾಜ ಬೊಮ್ಮಾಯಿ :- ಏಕೆ ವೈಯಕ್ತಿಕವಾಗಿ ತೆಗೆದುಕೊಳ್ಳುತ್ತೀರಿ? ನಿಮ್ಮ ಸರ್ಕಾರದ್ದು ಎಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಪೊಲೀಸ್ ಇಲಾಖೆ ನಡೆಸುತ್ತಿದ್ದೆ. ಅದಕ್ಕೋಸ್ಕರ, ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ :- ವಿರೋಧ ಪಕ್ಷದ ನಾಯಕರಾದ ತಾವು ತಾಳ್ಮೆ ಕಳೆದುಕೊಂಡರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸ್ವಲ್ಪ ಕೇಳಿ. ನಾನು ಐದು ವರ್ಷಗಳ ಕಾಲ ಇದ್ದೆ. ನನ್ನದನ್ನೂ ತೆಗೆಯಿರಿ, ನೀವು ಆರು ತಿಂಗಳಿನಲ್ಲಿ ಏನು ಮಾಡಿದ್ದೀರಿ, ಅದನ್ನೂ ತೆಗೆಯಿರಿ.

ಶ್ರೀ ಬಸವರಾಜ ಬೊಮ್ಮಾಯಿ :- ಎಲ್ಲಾ ದಾಖಲೆಗಳೂ ಇವೆ, ತೆಗೆಸೋಣ, ಅದಕ್ಕೇನಂತೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದು ಹೊರಗೆ ಬರಲಿ.

ಶ್ರೀ ಬಸವರಾಜ ಬೊಮ್ಮಾಯಿ :- ನಿಮ್ಮ ಸರ್ಕಾರದ ದಾಖಲೆಯನ್ನು ಯಾರೂ ಮುರಿಯಲು ಸಾಧ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಮ್ಮ ಸರ್ಕಾರದ್ದು ಆಯಿತಲ್ಲ? ಜನರು ನಮಗೆ ಪಾಠ ಕಲಿಸಿ ಹರಿಶ್ಚಂದ್ರನ ಮಕ್ಕಳೆಂದು ನಿಮ್ಮನ್ನು ಅಧಿಕಾರಕ್ಕೆ ತಂದರಲ್ಲ?

ಶ್ರೀ ಬಸವರಾಜ ಬೊಮ್ಮಾಯಿ :- ಹೌದು. ಅದಕ್ಕೋಸ್ಕರವೇ ತಂದಿದ್ದಾರೆ. ಅದಕ್ಕೆ ಜನರು ತೀರ್ಮಾನ ಮಾಡಿ ಅಧಿಕಾರದಲ್ಲಿ ನಮ್ಮನ್ನು ಕೂರಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು ಹತ್ತು ವರ್ಷದಲ್ಲಿ ಕೆಟ್ಟಿರಬೇಕು. ಆದರೆ, ನೀವು ಆರು ತಿಂಗಳಿನಲ್ಲೇ ಕೆಟ್ಟಿದ್ದೀರಲ್ಲ?

ಶ್ರೀ ಬಸವರಾಜ ಬೊಮ್ಮಾಯಿ :- ಹಾಗೆಂದು ಯಾರು ಹೇಳುತ್ತಾರೆ? ನೀವು ಹೇಳಿದರೆ ಜನರು ನಂಬುತ್ತಾರೆಯೇ? ಜನರು ಹೇಳಬೇಕು. ನಿಮ್ಮ ಎಲ್ಲಾ details ನಮ್ಮ ಹತ್ತಿರ ಇದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಕಾಂಗ್ರೆಸ್ ಸೋತು ಸುಣ್ಣವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ :- ಯಾರ್ಯಾರ ಕಾಲಕ್ಕೆ ಎಷ್ಟೆಷ್ಟು ಟ್ರಾನ್ಸ್‌ಫರ್ಸ್ ಆಗಿದೆ ಎಂಬುದರ ಬಗ್ಗೆ ಎಲ್ಲಾ ಡೀಟೆಲ್ಸ್ ಇದೆ. ಅದಕ್ಕೋಸ್ಕರವೇ ಜನರು ನಮಗೆ ಆಶೀರ್ವಾದ ಮಾಡಿ ನಮ್ಮನ್ನು ಅಧಿಕಾರದಲ್ಲಿ ಕೂರಿಸಿರುವುದು. ನೀವು ಏನು ಹೇಳುವುದು. ಜನರು ಹೇಳಬೇಕು. ನಿಮ್ಮ ಮಾತನ್ನು ಜನರು ನಂಬುತ್ತಾರೆಯೇ?

ಶ್ರೀ ಸಿ.ಎಂ. ಉದಾಸಿ :- ಜನರು ತೀರ್ಪು ಕೊಟ್ಟಿದ್ದಾರೆಂದು ಹೇಳುವುದಾದರೆ, ವಿಧಾನಸಭೆ ಚುನಾವಣೆಯ ತೀರ್ಪು ಬಂದಿದ್ದು 22ನೇ ಮೇ 2008ರಂದು..... ಒಂದು ನಿಮಿಷ ನಿಮಗೆ ಅನುಕೂಲವಾಗಲೆಂದು ಮಾತನಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅನಂತರ ಟ್ರಾನ್ಸ್‌ಫರ್ ದಂಧೆ. ಇದನ್ನು ಅವರ ಬಾಯಲ್ಲೇ ಕೇಳಿಕೊಳ್ಳಿ. ನಾನು ಹೇಳಿದರೆ ಏನಾಗುತ್ತದೆಂದರೆ, ವಿರೋಧ ಪಕ್ಷದವರಾದ ನಾವು ಹೇಳಿದಾಗ ಸ್ವಲ್ಪ ಚುಚ್ಚಿದಂತಾಗುತ್ತದೆ. ಬೇಕಾದರೆ, ಅವರು ವೆರಿಫೈ ಮಾಡಿಕೊಳ್ಳಲಿ. ಬೇರೆಯವರನ್ನು ಕರೆಸಿ ಕೇಳಿಕೊಂಡು ಹೇಳಲಿ. ಯಾವ ರೀತಿಯಾಗಿ ಇಷ್ಟೊಂದು 80% ಟ್ರಾನ್ಸ್‌ಫರ್ ಒಂದೇ ಇಲಾಖೆಯಲ್ಲಿ ಆರು ತಿಂಗಳಿನಲ್ಲಿ ಆಗಿರುವುದು ಎಲ್ಲಿಯೂ ಆಗಿಲ್ಲ. ಮತ್ತು ಬೇರೆ ಅನೇಕ ಇಲಾಖೆಗಳಲ್ಲಿ ಟ್ರಾನ್ಸ್‌ಫರ್ ಆಗಿದ್ದನ್ನು ಅವಶ್ಯಕತೆ ಅನುಸರಿಸಿ ಅಥವಾ ಪ್ರಮೋಷನ್ ಅಥವಾ death vacancies, retirement vacancies routine ಇದೆ. ಮಾಡಿದರೆ ಮಾಡಿ. ಆದರೆ, purposely, ಇವತ್ತಿನ ದಿವಸ ಅವನನ್ನು ತೆಗೆಯಿರಿ, ಇವನನ್ನು ತೆಗೆಯಿರಿ ಎಂದು ತೆಗೆಸಿ, ತಮಗೆ ಬೇಕಾದವರನ್ನು ಹಾಕಿಕೊಂಡರು. ಅದಕ್ಕೆ ಎಷ್ಟು? ಅಧಿಕಾರಿಗಳು ಯಾರ ಪರವಾಗಿದ್ದಾರೆ, ಯಾರ ವಿರೋಧವಾಗಿರುತ್ತಾರೆಂದು ಇಲ್ಲ. ಅವರು ಎಲ್ಲಾ ಸರ್ಕಾರಗಳ ಜೊತೆಯಲ್ಲೂ ಇರುತ್ತಾರೆ. ಅವರದೇ ಒಂದು ವರ್ಗ, ಅವರದೇ ಒಂದು ಜಾತಿ, ಇವರದು ನಡೆಯಿತು ಎಂದರೆ, ಇವರ ಜೊತೆಯಲ್ಲಿರುತ್ತಾರೆ, ಅವರದು ನಡೆದರೆ ಅವರ ಜೊತೆಯಲ್ಲಿ ಬರುತ್ತಾರೆ. ಹೀಗೆ ಯಾರಾರು ಸರ್ಕಾರದಲ್ಲಿರುತ್ತಾರೆ, ಅವರ ಮಾತನ್ನು ಕೇಳುತ್ತಾರೆ. ಯಾರಾದರೂ ಯಡಿಯೂರಪ್ಪನವರ ಮಾತನ್ನು ಕೇಳದೆ ಇರುತ್ತಾರೆಯೇ? ಇಲ್ಲದಿದ್ದರೆ, ಅಂತಹವರು ಒಂದು ನಿಮಿಷವೂ ಇರುವುದಿಲ್ಲ. ಏಕೆಂದರೆ, ಅವರ ಮಾತನ್ನು ಕೇಳಲಿಲ್ಲವೆಂದರೆ,

ತಕ್ಷಣವೇ ಅವರು ಅಲ್ಲಿಂದ get out. ಬೇರೆ ಇಲಾಖೆಯಿಂದಲೇ ಓಡಿಸುತ್ತಾರೆ. ಇನ್ನು ಅವರು ತಮ್ಮ ಇಲಾಖೆಯನ್ನು ಬಿಡುತ್ತಾರೆಯೇ? ಅದಕ್ಕೋಸ್ಕರ, ಅವರು ಇದರಲ್ಲಿ ಸಂಪೂರ್ಣ ಹಿಡಿತವಿಟ್ಟುಕೊಂಡು ಮಾಡಿದ್ದಾರೆ, ಇರಲಿ. (ಗೊಂದಲ) ......ಅದನ್ನು ಎನ್‌ಕ್ವೈರಿ ಮಾಡಿ, ಒಂದು ಕಮಿಷನ್ ಮಾಡಿ. ರಾಜ್ಯಪಾಲರು ಇದ್ದಾಗ ನಾವು ಟ್ರಾನ್ಸ್‌ಫರ್ ಮಾಡಿದ್ದು, ನೀವು ಟ್ರಾನ್ಸ್‌ಫರ್ ಮಾಡಿದ್ದು, ಎಲ್ಲವನ್ನೂ ಎನ್‌ಕ್ವೈರಿ ಮಾಡಿಸಿ. ಇಲ್ಲವೇ ಸದನ ಸಮಿತಿ ಮಾಡುವುದಿದ್ದರೆ, ಮಾಡಿ.

ಅಧ್ಯಕ್ಷರು :- ಯಾರೂ ಪರಸ್ಪರ ಮಾತನಾಡಬೇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅತಿವೃಷ್ಟಿ-ಅನಾವೃಷ್ಟಿಯಲ್ಲಿ ನಿಮಗೆ 350 ಕೋಟಿ ರೂ.ಗಳು recently ಬಂತು. ಅದನ್ನು ತಾವು ಎಷ್ಟರಮಟ್ಟಿಗೆ ಖರ್ಚು ಮಾಡಿದ್ದೀರಿ, ಎಲ್ಲೆಲ್ಲಿ ಖರ್ಚು ಮಾಡಿದ್ದೀರಿ? ಏಕೆಂದರೆ, ಅನೇಕ ಹಳ್ಳಿಗಳು ನೀರಿನಿಂದಾಗಿ ಮುಳುಗಡೆಯಾಗಿವೆ. ಮನೆಗಳು ಬಿದ್ದು ಹೋಗಿವೆ. ಅಂತಹವರಿಗೆ ಇನ್ನೂ ಪರಿಹಾರದ ಹಣ ಮುಟ್ಟಿಲ್ಲ. ಕೆಲವು ಕಡೆ crop compensation ಕೂಡ ಕೊಟ್ಟಿಲ್ಲ. ಉದಾಹರಣೆಗೆ, ಗುಲ್ಬರ್ಗಾದಲ್ಲಿ ಆ ಭಾಗದಲ್ಲಿ ವಿಶೇಷವಾಗಿ ಮುಂಗಾರು ಬೆಳೆಗಳು ನಾಶವಾದವು. ಆಗ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದರು. ಆಳಂದ, ಅಫಜಲಪುರ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಬೆಳೆ ನಾಶವಾದದ್ದನ್ನು ಕಂಡು, ಇದಕ್ಕೆ ಏನಾದರೊಂದು ಪರಿಹಾರ ಕಂಡು ಹಿಡಿಯೋಣವೆಂದು ಗುಲ್ಬರ್ಗಾಕ್ಕೆ ಬಂದಿದ್ದರು. ಅದೂ ಆಗಲಿಲ್ಲ. ಅನಂತರ, ಕಬ್ಬಿನ ಬೆಳೆಗೆ 160 ರೂ. ನಿಗದಿಪಡಿಸುವುದರ ಬಗ್ಗೆ ನಿನ್ನೆ ಚರ್ಚೆಯಾಯಿತು. ಇನ್ನೂ 60 ಲಕ್ಷ ರೂ.ಗಳ deferred payment ನೀಡುವುದಾಗಿ Sugar Minister ಹೇಳಿದ್ದಾರೆ. ಅಂದರೆ, ಇಲ್ಲಿಯವರೆಗೆ ಇದರ ಬಗ್ಗೆ ಯಾವ ಚಿಂತನೆಯೂ ಆಗಿಲ್ಲ. ಹೀಗೆ ಅನೇಕ ಬಾಬ್ತುಗಳಲ್ಲಿ ಇವತ್ತಿನ ದಿವಸ ಸರ್ಕಾರ ವಿಫಲವಾಗಿದೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ.

ಇನ್ನು ಭಯೋತ್ಪಾದನೆ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಭಯೋತ್ಪಾದನೆಯನ್ನು ನಿಲ್ಲಿಸಬೇಕು, ಅದಕ್ಕೆ ಆಸ್ಪದ ಕೊಡಬಾರದು ಎಂಬುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಅದಕ್ಕೆ ಏನೇನು ಕ್ರಮಗಳನ್ನು ಜರುಗಿಸಬೇಕೆನ್ನುವುದು ಬಹಳ ಮುಖ್ಯವಾದುದು. ವಿಶೇಷವಾಗಿ, ಪೊಲೀಸ್ ಇಲಾಖೆ. Home Department ಅನ್ನು strengthen ಮಾಡಬೇಕು. Home

Department ಬಗ್ಗೆ ಕಳೆದ ಸಲ ಹೇಳಿದೆ. ಕೆಲವು ಕಡೆ ಪೆಟ್ರೋಲ್ ಬಿಲ್ ಅನ್ನು ಬೇಗ ಕೊಡುವುದಿಲ್ಲ.

ಪಾಪ ಅನೇಕ petrol bunkನವರು ಇವರಿಗೆ petrol ಹಾಕುವುದಿಲ್ಲ. ಅನೇಕ ಸಾರಿ escort pilot ಎಂದು ಕಳುಹಿಸಿರುತ್ತಾರೆ. ಅವರು ಮುಜುಗರಕ್ಕೆ ಬೀಳುತ್ತಾರೆ. ಅಲ್ಲಿ Assistant Commissioner ಮತ್ತು D.C. ಅವರೂ ಕೂಡ ಮುಜುಗರದಲ್ಲಿ ಇದ್ದಾರೆ. ಏಕೆಂದರೆ payment ಬೇಗನೇ ಆಗುವುದಿಲ್ಲ, ಅವರು ಇವರಿಗೆ petrol ಹಾಕುವುದಿಲ್ಲ. ಅದಕ್ಕೆ ಅವರ ಮೇಲೆ ಅನೇಕ ಸಾರಿ false case ಹಾಕುವುದು, ಬಯ್ಯುವುದು, ಹೆದರಿಸಿ ಅಲ್ಲಿಂದ ತರುವುದು. ಅವರು ಏನು ಮಾಡುತ್ತಾರೆ ಎಂದರೆ ಹತ್ತು ಲೀಟರ್ ಕೊಡುವ ಕಡೆ ಐದು ಲೀಟರ್ ಕೊಡುತ್ತಾರೆ. 50 ಲೀಟರ್ ಕೊಡುವ ಕಡೆ 20 ಲೀಟರ್ ಕೊಡುತ್ತಾರೆ. ಈ ರೀತಿ ಮಾಡಿ ಈ ಸರ್ಕಾರದ ಮರ್ಯಾದೆ ತೆಗೆಯತಕ್ಕಂಥಾದ್ದು ಅನೇಕ ಕಡೆಯಾಗಿದೆ. ಅದಕ್ಕೆ ಹಿಂದೆ modernization schemeನಲ್ಲಿ ಹೆಚ್ಚಿನ ಹಣವನ್ನು ಅದಕ್ಕೆ ಕೊಟ್ಟು ಒಂದು ರೀತಿಯಾಗಿ develop ಮಾಡಿದರು. ಆದರೆ ಈಗ ಏನಾಗಿದೆ ಎಂದರೆ ಒಂದು ಕಡೆ ಕೇಂದ್ರ ಸರ್ಕಾರದಿಂದ modernization schemeನಲ್ಲಿ allocation ಕಡಿಮೆಯಾದರೆ, ಇನ್ನೊಂದು ಕಡೆ ರಾಜ್ಯ ಸರ್ಕಾರ ಕೂಡ ಸಂಪೂರ್ಣವಾಗಿ neglect ಮಾಡಿದೆ. ಈ negligenceನಿಂದ Home Department ಕುಸಿದುಬಿದ್ದರೆ, ಖಂಡಿತವಾಗಿ ಯಾವ ಕೆಲಸ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಯಾವುದೇ ಒಂದು ಸರ್ಕಾರದ prime duty ಎಂದರೆ to maintain law and order. Law and order ಚೆನ್ನಾಗಿ ಇದ್ದರೆ ಎಲ್ಲಾ ಸುಲಲಿತವಾಗಿ ನಡೆಯುತ್ತದೆ. ನಿಮ್ಮ ಅಭಿವೃದ್ಧಿ ಕೆಲಸ, ನಿಮ್ಮ ವ್ಯಾಪಾರ, ನಿಮ್ಮ ಅನೇಕ industryಗಳು ಚೆನ್ನಾಗಿ ನಡೆಯುತ್ತವೆ. ನಿಮಗೆ ಅಶಾಂತಿ ಇದೆ ಎಂದರೆ ನಿಮ್ಮ ಹತ್ತಿರ investors ಬರುವುದಿಲ್ಲ. ಬೇರೆ ಯಾರೂ ಕೂಡ ಶಾಂತಿಯಿಂದ ನೆಮ್ಮದಿಯಿಂದ ಬಾಳ್ವೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ law and order is a must. ಮಾನ್ಯ ಅಧ್ಯಕ್ಷರೆ, ಈ ಎರಡು ಇಲಾಖೆಗಳು ಬಹಳ ಮುಖ್ಯ. ನೀವು ಒಳ್ಳೆಯ administration ಕೊಡಬೇಕೆಂದರೆ ಎರಡೇ ಎರಡು ಇಲಾಖೆಗೆ ಹೆಚ್ಚು ಗಮನವನ್ನು ಕೊಡತಕ್ಕಂಥಾದ್ದು ಬಹಳ ಮುಖ್ಯ ಮತ್ತು ಜನರ grievances ಅನ್ನು redress ಮಾಡತಕ್ಕಂಥ ಇಲಾಖೆಗಳು ಎಂದರೆ

ಒಂದು Home Department, ಇನ್ನೊಂದು Revenue Department. ಜನ ಆ ಎರಡೇ ಇಲಾಖೆಯನ್ನು ಗುರುತಿಸತಕ್ಕಂಥಾದ್ದು. ನೀವು ನೋಡಿ, Education Department ನಲ್ಲಿ teachers ಇಲ್ಲವೆಂದರೆ Deputy Commissioner office ಮುಂದೆ ಧರಣಿ, ಇಲ್ಲವೆಂದರೆ AC Office ಮುಂದೆ ಧರಣಿ, ಇಲ್ಲ ತಹಸೀಲ್ದಾರ್ office ಮುಂದೆ ಧರಣಿ ಮಾಡುತ್ತಾರೆ. Electricity ಇಲ್ಲವೆಂದರೂ ಕೂಡ ಅಲ್ಲಿಯೇ ಧರಣಿ ಮಾಡುತ್ತಾರೆ. ಏಕೆಂದರೆ ನೀವು ಅವರನ್ನು ಜಿಲ್ಲೆಗೆ ಅಥವಾ ತಾಲ್ಲೂಕು captain ಮಾಡದೇ ಇದ್ದರೂ ಕೂಡ, ಅವರು ಅವರೇ ನಮ್ಮ captain ಎಂದು ತಿಳಿದುಕೊಂಡು ಎಲ್ಲರೂ ಅಲ್ಲಿಗೆ ಹೋಗುತ್ತಿದ್ದಾರೆ. ಅದನ್ನು strengthen ಮಾಡುವಂಥಾದ್ದನ್ನು ಎಲ್ಲರೂ ಮರೆತುಬಿಟ್ಟಿದ್ದಾರೆ. ಇವತ್ತು Police Department and Revenue Department ಎಷ್ಟು week ಆಗುತ್ತಿದೆ, ಅಷ್ಟೇ administration week ಆಗುತ್ತಿದೆ. ಜನ ಎಲ್ಲಾ ಕಡೆ Revenue Department and Home Department ಗುರುತಿಸುವುದು. ಆ ಎರಡು departments ಇವತ್ತು collapse ಆಗಿವೆ. ಏಕೆಂದರೆ ಅದಕ್ಕೆ ಹಣ ಇಲ್ಲ, ಕೇಳುವವರಿಲ್ಲ, ಅಲ್ಲಿಗೆ ಕೊಡಬೇಕಾದಂತಹ sufficient equipment ಇಲ್ಲ. ಅದಕ್ಕೆ ಭಯೋತ್ಪಾದನೆ control ಮಾಡುವುದಕ್ಕೂ ಕೂಡ ನಾಳೆ ಇದರಿಂದ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಅವುಗಳಿಗೆ ಬೇಕಾದಂತಹ equipment, rapid forces ಇಂಥಾದ್ದೆಲ್ಲ ಕೂಡ ತಯಾರು ಮಾಡಬೇಕಾಗುತ್ತದೆ. ಇನ್ನು ನೀವು Anti-terrorist ಎದುರಿಸುವುದಕ್ಕೆ policeನವರಿಗೆ Anti terrorist training ಕೊಡಿ. ಕೇವಲ publicityಗೋಸ್ಕರ ಮಾಡುವುದಲ್ಲ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಸ್ವಾಮಿ ವಿವೇಕಾನಂದರವರ birthday ಎಂದು ಅಲ್ಲಿ ಹೋಗಿ ಮಾತನಾಡಿದರು. ಅದಕ್ಕೆ ಯಾರೂ oppose ಮಾಡುವುದಿಲ್ಲ. ಅದಕ್ಕೆ ಯಾರಾದರೂ oppose ಮಾಡುತ್ತಾರ? ಸುಭಾಷ ಚಂದ್ರ ಬೋಸ್‌ರವರ birthdayಗೆ ಯಾರೂ oppose ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಆ ನೆವದ ಅಡಿಯಲ್ಲಿ ಮಾನ್ಯ ಅರವಿಂದ ಲಿಂಬಾವಳಿಯವರು ಜನರನ್ನು ಸೇರಿಸುವುದು. ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಭಾಷಣ ಮಾಡುವುದು. ಆ ಒಂದು ತಂತ್ರ ಚೆನ್ನಾಗಿ

ಕಲಿತಿದ್ದಾರೆ. ಇದು ಹೇಗೆಂದರೆ ಸರ್ಕಾರದ ಹಣ, Education Departmentನಿಂದ ಅರವಿಂದ ಲಿಂಬಾವಳಿಯವರು organize ಮಾಡುವುದು, ಅಲ್ಲಿಗೆ ಮಾನ್ಯ ಯಡಿಯೂರಪ್ಪನವರು ಹೋಗಿ ಭಾಷಣ ಮಾಡುವುದು. ಹಾಗಾಗಿ ಅಲ್ಲಿ ಕೂಡ indirectly infiltration ಇದೆ. ನಮಗೆ ದೇಶಪ್ರೇಮದ ಕಥೆಯನ್ನು ಹೇಳುವುದು, ಅಲ್ಲಿ ಬಿಜೆಪಿ ಕಥೆ ಹೇಳುವುದು. ಅಪ್ರತ್ಯಕ್ಷವಾಗಿ ಇದು ಒಂದು ರೀತಿಯಲ್ಲಿ ಕೇಸರಿಕರಣ ಮಾಡತಕ್ಕಂಥ ಕೆಲಸ. ತಮಗೂ ಕೂಡ ನಗು ಬರುತ್ತಿದೆ, ಏಕೆಂದರೆ ನಾವೆಲ್ಲ ಒಂದೇ ರೀತಿ ಇದ್ದೇವೆ ಎಂದು. ಆದರೆ ನಿಮ್ಮನ್ನು ಬಹಳ ದೂರ ಇಟ್ಟಿದ್ದಾರೆ, ತಾವು ಸ್ವಲ್ಪ ಹುಷಾರಾಗಿ ಇರಬೇಕು. ಇದು ಈ ರೀತಿಯಾಗಿ ಕೇಸರಿಕರಣ ಮಾಡುವುದು. ಅದು ಹೇಗೆಂದರೆ ಗೊತ್ತಾಗದ ಹಾಗೆ ಮಾಡುವುದು. ಮಾನ್ಯ ಲಿಂಬಾವಳಿಯವರು RSSನಲ್ಲಿ ಇದ್ದರೆಂದು ಕಾಣುತ್ತಿದೆ. ಅದಕ್ಕೆ ಆ ರೀತಿ idea ತೆಗೆದುಕೊಂಡು ವಿದ್ಯಾರ್ಥಿಗಳನ್ನು ಒಂದು ಕಡೆ ಈ birthday ಹೆಸರಿನಲ್ಲಿ, ಜನ್ಮಶತಾಬ್ದಿ ಹೆಸರಿನಲ್ಲಿ ಒಗ್ಗೂಡಿಸತಕ್ಕಂಥಾದ್ದು, ಅದರ ಬಗ್ಗೆ ಪ್ರಚಾರ ಇವರು ಮಾಡುವುದು. ಯಾರದೋ ಹಣ ಯಲ್ಲಮ್ಮನ ಜಾತ್ರೆ ಎನ್ನುವ ಹಾಗೆ ಮಾಡಿಕೊಳ್ಳುತ್ತಿದ್ದೀರಿ. ಇದು ನಡೆಯುತ್ತಿದೆ, ನಡೆಯಲಿ. ಈಗ ಇಲ್ಲಿ control ಮಾಡುವುದಕ್ಕೆ ultimately police force ಬೇಕು. ಆ police force ಅನ್ನು use ಮಾಡತಕ್ಕಂಥಾದ್ದು ಅವಶ್ಯ ಇದೆ. ಅದಕ್ಕಾಗಿ less interference ಆಗುವುದು ಬಹಳ ಮುಖ್ಯ. Police ಇಲಾಖೆಯಲ್ಲಿ interference ಮಾಡಿ. ಎಲ್ಲಿ ಅನ್ಯಾಯವಾಗುತ್ತದೆ? ಎಲ್ಲಿ ಶೋಷಣೆಯಾಗುತ್ತದೆ? ಎಲ್ಲಿ ದಬ್ಬಾಳಿಕೆ ಇರುತ್ತದೆ? ಎಲ್ಲಿ ಗೂಂಡಾಗಳಿಗೆ ಸದೆ ಬಡೆಯಬೇಕು, ಅಂತಹ ಕಡೆ ಅವರನ್ನು interfere ಮಾಡಿ. ನೀವು ಅದನ್ನು ಬಿಟ್ಟು ಸಣ್ಣ ಸಣ್ಣ ಮಾತಿನಲ್ಲಿ, ನೀವು ನಮ್ಮ ಮಾತು ಕೇಳಲಿಲ್ಲ, ನಮಗೆ salute ಹೊಡೆಯಲಿಲ್ಲ, ನಾವು ಕರೆದ ಕಡೆ ಬರಲಿಲ್ಲ, ನಮ್ಮ ಬೀಗರ property ಉಳಿಸಲಿಲ್ಲ, ಆ ಕಾರಣಕ್ಕೋಸ್ಕರ complaint ಬಂದು ಅವರನ್ನು ತೆಗೆದು ಹಾಕಿದರೆ, ಖಂಡಿತವಾಗಿ ಆಡಳಿತ ಕೆಟ್ಟು ಹೋಗುತ್ತದೆ. ಅವರಿಗೆ impartial ಆಗಿ ಕೆಲಸ ಮಾಡಪ್ಪ, ನಮ್ಮ ಹತ್ತಿರ complaint ಬರಬಾರದು, law and order maintain ಮಾಡುವುದು ನಿಮ್ಮ ಜವಾಬ್ದಾರಿ ಎಂದು ಹೇಳಿ. ಆ ರೀತಿ Law and order maintain ಮಾಡಿದರೆ longevity of administration life ಇರುತ್ತದೆ ಮತ್ತು ಒಳ್ಳೆಯ

administration ಕೊಡುವುದಕ್ಕಾಗುತ್ತದೆ. ನಾವು ಈಗಾಗಲೇ ಹೇಳಿದ ಹಾಗೆ ಅಭಿವೃದ್ಧಿ ಕೂಡ ಆಗುತ್ತದೆ. ಇವೆಲ್ಲವೂ ಕೂಡ ನಿಮಗೆ ಬೇಕು ಎಂದರೆ interfere ಮಾಡಬೇಡಿ. ಇಲ್ಲ ನಮಗೆ ಏನೂ ಬೇಡ, ಇದ್ದಷ್ಟು ದಿವಸ ಸಾಕು ಎನ್ನುವುದಾರೆ ಅದು ನಿಮಗೆ ಬಿಟ್ಟಂತಹ ವಿಚಾರ. ನಾವು ಜಾಸ್ತಿ ದಿವಸ ಇಲ್ಲಿ ಕುಳಿತಿರುವುದು ಬೇಡ, ಆದಷ್ಟು ಬೇಗ ನಿರ್ಗಮಿಸಬೇಕೆಂದರೆ, ಅದು ನಿಮಗೆ ಬಿಟ್ಟಂತಹ ವಿಚಾರ, ನಾನು ನಿಮಗೆ ಹೆಚ್ಚು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲದೆ ಚರ್ಚ್‌ಗಳ ಮೇಲೆ ದಾಳಿ ನಡೆದಿದೆ. ಆ ದಾಳಿಯನ್ನು ನೀವು ಒಂದು ಅಥವಾ ಎರಡು ದಿವಸದಲ್ಲಿ control ಮಾಡಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ದಾಳಿ 17ನೇ ಆಗಸ್ಟ್ ತಿಂಗಳಿನಲ್ಲಿ ಪ್ರಾರಂಭವಾಗಿದ್ದು, 28 ಚರ್ಚ್‌ಗಳ ಮೇಲೆ stateನಲ್ಲಿ target ಮಾಡಿ ದಾಳಿ ನಡೆದವು. ಒಂದು incident ದಾವಣಗೆರೆಯ ಜಯನಗರದಲ್ಲಿ ಆಗಿದ್ದು. ಆಗಸ್ಟ್ 24ಕ್ಕೆ ಪುನಃ ದಾವಣಗೆರೆಯಲ್ಲಿಯೇ ಆಗಿದ್ದು. August 27th, September 7th, September 14th, ಅದೇ ರೀತಿಯಾಗಿ ಕಾವೂರು Mangalore City, Kodikal, Mangalore city, Adorsion monastery, Mangalore, Moodoor village Udupi. Kotteshwar village, Udupi, ಹೀಗೆ ಸತತವಾಗಿ ದಾಳಿಯಾಗಿದ್ದು. ನಂತರ September 15th ಮತ್ತೆ ದಾಳಿಯಾಯಿತು. September 18th, 19th, 21st ಗೆ ಈ ರೀತಿಯಾಗಿ ಸತತವಾಗಿ ದಾಳಿಗಳು ನಡೆದವು. ದಾಳಿ Augustನಲ್ಲಿ ಪ್ರಾರಂಭವಾಗಿದ್ದು, September, Octoberವರೆಗೆ ನಡೆಯಬೇಕಾದರೆ, ನಿಮ್ಮಲ್ಲಿ informants ಇರುತ್ತಾರೆ, CIDಗಳು ಇರುತ್ತಾರೆ ಅಥವಾ ನಿಮ್ಮ ಅಧಿಕಾರಿಗಳು ಇರುತ್ತಾರೆ. ನೀವು ದಾಳಿಯನ್ನು ಏಕೆ ತಕ್ಷಣ ನಿಲ್ಲಿಸಲಿಲ್ಲ? ಇದಕ್ಕೆ ಕಾರಣಕರ್ತರು ಯಾರು? ನಮ್ಮ Home Minister ಆಚಾರ್ಯರವರು ಅಲ್ಲಿಂದ ಬರುತ್ತಾರೆ. ಆಚಾರ್ಯರವರು, ಏನು ಮಾಡಿದರೂ ಬಾರಾ ಕೂನ್ ಮಾಫ್ ಇದೆ ಅವರಿಗೆ. ಅಲ್ಲಿ ಪದ್ಮಪ್ರಿಯ ಕೇಸಾಯಿತು, ಮಾಫ್. Journalist ಸೀತಾರಾಂ ಕೇಸ್ ಆಯಿತು, ಅದು ಮಾಫ್. ಚರ್ಚ್ ಮೇಲೆ ದಾಳಿಯಾದರೂ, ಮಾಫ್. ಮೊನ್ನೆ ಮತ್ತೆ ಗಲಾಟೆಯಾಗಿ, stabbing ಆಗಿ ಒಬ್ಬರು ಸತ್ತರು, ಅದು ಮಾಫ್. ಅವರ ಜಿಲ್ಲೆ ಅಥವಾ ಮತಕ್ಷೇತ್ರದಲ್ಲಿ ಅವರ ಮೂಗಿನೆದುರೇ ಹತ್ತಾರು ಕೇಸುಗಳು, ಹತ್ತಾರು ಕೊಲೆಗಳು ನಡೆದರೂ ಕೂಡ ಅವರೇನೂ ಬದಲಾವಣೆ

ಆಗುವುದಿಲ್ಲ. ಅಂದರೆ ಇವರು ಎಷ್ಟರಮಟ್ಟಿಗೆ ಕಾಳಜಿ ವಹಿಸಿದ್ದಾರೆ ಎನ್ನುವುದರ ಬಗ್ಗೆ ಚಿಂತನೆ ಮಾಡಿ. ಏಕೆ? ನನಗೆ ಅನಿಸಿದ ಮಟ್ಟಿಗೆ ಅವರದು ಇವರದು ಸಂಧಾನ ಆಗಿದೆಯೇನೋ ಗೊತ್ತಿಲ್ಲ. ಏಕೆ ಕೆಲಸ ಮಾಡುವುದಿಲ್ಲವೆಂದು ಕೇಳುವುದಿಲ್ಲ. ಇವರೂ ಕೂಡ ಅವರಿಂದ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ. ಹಾಗಿದ್ದಾಗ ಉಪಯೋಗ ಏನಿದೆ? ನಾಳೆ ಅವರ ಕುರ್ಚಿಗೆ ಧಕ್ಕೆ ಬರುತ್ತದೆ. ನಾಳೆ law and order problem ಆಯಿತು, ಅನೇಕ ಕಡೆ ದಂಗೆಗಳು ಎದ್ದವು ಎಂದರೆ ಅದಕ್ಕೆ ಯಾರು ಜವಾಬ್ದಾರರು? ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಜವಾಬು ಕೊಡಬೇಕಾಗುತ್ತದೆ ಹೊರತಾಗಿ Home Minister ತಮ್ಮ responsibility ತಪ್ಪಿಸಿಕೊಳ್ಳಬಹುದು. ನಾನು ಏನು ಮಾಡಲಿ ಸ್ವಾಮಿ, ನನಗೆ ಒಬ್ಬ Sub-Inspectorನ್ನು transfer ಮಾಡುವ ಅಧಿಕಾರ ಇಲ್ಲ ಎಂದು ಹೇಳುತ್ತಾರೆ.

ಈ ವ್ಯವಸ್ಥೆ ಇರುವಾಗ, ಈ administration ಇರುವಾಗ, ಇವರಿಂದ ಒಳ್ಳೆಯ ಆಡಳಿತವನ್ನು ಕೊಡಲು ಸಾಧ್ಯವಿದೆಯಾ? ಅಥವಾ ಒಳ್ಳೆಯ ಆಡಳಿತವನ್ನು ಕೊಡುತ್ತಿದ್ದಾರ? ಚರ್ಚ್ ಮೇಲೆ ದಾಳಿ ನಡೆದಿರುವುದನ್ನು ನಿಲ್ಲಿಸಲಿಲ್ಲ. ಧರ್ಮ ಧರ್ಮಗಳಲ್ಲಿ ಜಗಳ ಹಚ್ಚುವುದು, ಭಾಷೆ ಭಾಷೆಗಳಲ್ಲಿ ಜಗಳ ಹಚ್ಚುವುದು, ಅನೇಕ ಬಡವರ ಮೇಲೆ ಅನ್ಯಾಯವಾದರೂ ನೋಡುವ ಹಾಗೆ ಇಲ್ಲ. ಎಲ್ಲವನ್ನೂ ಮಾನ್ಯ ಮುಖ್ಯಮಂತ್ರಿಯವರೇ ನೋಡುತ್ತಾರೆಂಬುದಲ್ಲ. ನೀವು Home Minister ಅನ್ನು ಮಾಡಿದ್ದೀರಿ, ಇವರು ಏನು ನಿದ್ರೆ ಮಾಡುತ್ತಾರ? ಅಥವಾ Home Minister ರವರು ಹೋಗಿ ಇದರ ಬಗ್ಗೆ action ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಇದು 17th August ಆಗಿದೆಯೆಂದರೆ, ಆಗಸ್ಟ್‌ನಿಂದ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ದಾಳಿಗಳು ನಡೆದಿರುವಂಥಾದ್ದನ್ನು ಮಧ್ಯದಲ್ಲಿ ಏಕೆ ನಿಲ್ಲಿಸಲಿಲ್ಲ? ಅದರ ಅರ್ಥ ಅವರು ಅಪ್ರತ್ಯಕ್ಷವಾಗಿ ಇದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆನ್ನುವಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ಏಕೆಂದರೆ ನಿಮ್ಮ ಅಜೆಂಡಾ hidden agenda. ಆ hidden ಅಜೆಂಡಾವನ್ನು implement ಮಾಡುವುದಕ್ಕೋಸ್ಕರ, ಇವತ್ತು ನೀವು divide and rule ಮಾಡಿ, ಜನರನ್ನು ನಿಮ್ಮ ಅಧೀನದಲ್ಲಿಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಇದಕ್ಕೆ Home Minister ರವರು ಪ್ರೋತ್ಸಾಹ ಕೊಡುತ್ತಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬೆಂಬಲವನ್ನು ನೀಡುತ್ತಿದ್ದಾರೆ. ಇಲ್ಲವೆಂದರೆ ಯಾರೂ ಕೂಡ

ತಿಂಗಳಾನುಗಟ್ಟಲೆ ಚರ್ಚ್‌ಗಳ ಮೇಲೆ ದಾಳಿ ಮಾಡುವಂಥ ಧೈರ್ಯ ಮಾಡುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾನೂನಿಗೆ ಹೆದರತಕ್ಕಂಥ ಜನರು, law abiding citizens ಇದ್ದಾರೆ. ಆದರೆ ಏಕೋ ಏನೋ Government ನಿರ್ಲಕ್ಷ್ಯತೆಯಿಂದ, ಇದರ ಬಗ್ಗೆ ಕಾಳಜಿಯನ್ನು ವಹಿಸದೇ ಇದ್ದ ಕಾರಣ, ಇವತ್ತು ಈ ಕೆಲಸ ನಡೆದಿದೆ. ಅದಕ್ಕೆ ಸಂಪೂರ್ಣವಾದ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳಬೇಕಾಗುತ್ತದೆ. ಇದರ ಜೊತೆಯಲ್ಲಿ ಇವತ್ತು ಒಂದು ಕಡೆ....

ಶ್ರೀ ಕೆ.ಜೆ. ಜಾರ್ಜ್ :- ಮಾನ್ಯ ಅಧ್ಯಕ್ಷರೆ, ಚರ್ಚ್‌ಗಳ ಮೇಲೆ ದಾಳಿ ಹೇಗೆ ಆಗಿದೆಯೆಂದರೆ, ನಾನು ಮಾನ್ಯ ಎಂ.ಪಿ.ಪ್ರಕಾಶ್‌ರವರು ಮತ್ತು ಮಾನ್ಯ ಡಿ.ಬಿ.ಚಂದ್ರೇಗೌಡರು ಮಂಗಳೂರಿಗೆ ಭೇಟಿ ಕೊಟ್ಟಿದ್ದೆವು. ತಮಗೆ ಆಶ್ಚರ್ಯವಾಗಬಹುದು, ಅಲ್ಲಿಯೇ Home Minister ಇದ್ದರು. ಅವರ ಊರಿನಲ್ಲೇ ದಾಳಿ ನಡೆಯುತ್ತಿದೆ. ಅವರು ಚರ್ಚ್‌ಗಳನ್ನು visit ಮಾಡಬೇಕಾಗಿತ್ತು. ಆ ಕೆಲಸವನ್ನು ಮಾಡಿಲ್ಲ. ಮೊನ್ನೆ ಮಾನ್ಯ ಸೋಮಶೇಖರ್ ಕಮಿಷನ್ ಮಾಡಿ, enquiry ಮಾಡಿಸುತ್ತಿದ್ದಾರೆ. ಇವರು ದಾವಣಗೆರೆಗೆ ಹೋಗಿ ಅಲ್ಲಿ ಕ್ರಿಸ್‌ಮಸ್ ಟೈಮ್‌ನಲ್ಲಿ ಚರ್ಚ್ ಅನ್ನು open ಮಾಡಿ ಎಂದು ಹೇಳಿ, ಅವರನ್ನು ಘೆರಾವ್ ಮಾಡಿ, ಅವರ ಮೇಲೆ force ಮಾಡುತ್ತಾರೆ. ಈ ರೀತಿ Commission Chairmanಗೆ ಅಲ್ಲಿ ಘೆರಾವ್ ಮಾಡುವಂಥ ಪರಿಸ್ಥಿತಿ ಬಂದರೆ, ಯಾವ ರೀತಿಯಲ್ಲಿ ಈ ಪ್ರಜಾಪ್ರಭುತ್ವ ನಡೆಯುತ್ತದೆ? ನಾನು ಹೇಳುವುದೇನೆಂದರೆ ಯಾರಾದರೂ ಬಲವಂತವಾಗಿ ಮತಾಂತರ ಮಾಡುವಂಥಾದ್ದನ್ನು ಮಾಡಿದರೆ ನಾವು ವಿರೋಧ ಮಾಡುತ್ತೇವೆ. ಅದಕ್ಕೆ ಕಾನೂನು ಇದೆ. ಆ ಕಾನೂನಿನ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಿ. ಇಲ್ಲಿ ಯಾರೋ ಹೋಗಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು, ಅವರನ್ನು ಥಳಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತಿದ್ದೇನೆ. ಇದನ್ನು ಮಾಡುವುದಕ್ಕೆ ಬಿಡಬೇಡಿ. ನಮ್ಮ ಸಂವಿಧಾನದಲ್ಲಿ ಯಾರಿಗೆ ಏನು ಸ್ವಾತಂತ್ರ್ಯವಿದೆ, ಅದರ ಪ್ರಕಾರ ಜನರಿಗೆ ನಡೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಿ ಎಂಬ ಮಾತನ್ನು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈ ಒಂದು ಘಟನೆ ನಡೆದರೂ ಕೂಡ ಇಲ್ಲಿ Home Ministerರವರು ಉಡುಪಿಯವರಾಗಿದ್ದಾರೆ. ಅವರು immediate ಆಗಿ ಚರ್ಚ್‌ಗಳನ್ನು visit ಮಾಡಿ, ಸಮಾಧಾನ

ಮಾಡುವಂಥ ಕೆಲಸವನ್ನು ಏಕೆ ಮಾಡಲಿಲ್ಲ? ಹೆದರಿಕೆ ಏನು? ಅವರು ಭಾರತೀಯ ಜನತಾ ಪಾರ್ಟಿ ಮೆಂಬರ್ಸ್ ಅಲ್ಲವೆಂದಾ ಅಥವಾ ಇವರಿಗೆ ಅವರು ಮತ ಕೊಟ್ಟಿಲ್ಲವೆಂದಾ? ಅವರು ಇದೇ ಜಿಲ್ಲೆಯವರಾಗಿ, ಯಾವ ಜಿಲ್ಲೆಯಲ್ಲಿ ಸತತವಾಗಿ ಈ ಘಟನೆಗಳು ನಡೆಯುತ್ತಿವೆ, ಅಲ್ಲಿ ಚರ್ಚ್‌ಗಳಿಗೆ ಭೇಟಿಯಾಗಿ, ಅವರಿಗೆ ಸಾಂತ್ವನ ಹೇಳಿ, ನಾವು ಈ ಬಗ್ಗೆ action ತೆಗೆದುಕೊಳ್ಳುತ್ತೇವೆಂದು ಹೇಳಿ, ಸಮಾಧಾನ ಮಾಡುವುದನ್ನು ಬಿಟ್ಟು ಕೈ ಕಟ್ಟಿಕೊಂಡು ಮನೆಯಲ್ಲಿ ಕುಳಿತುಕೊಂಡಿದ್ದಾರೆ. ಅದಕ್ಕೆ ಯಾವುದಾದರೂ ಒಂದು ಸಮಾಧಾನವನ್ನು ಹೇಳುವುದು, ಅಲ್ಲಿಗೆ ಆ ವಿಷಯವನ್ನು ಮುಚ್ಚಿ ಬಿಡುವುದು. ಈ ರೀತಿಯಾಗಿ ನಿಷ್ಕ್ರಿಯವಾಗಿ ಒಬ್ಬ Home Minister ಇದ್ದರೆ, ಯಾವ ರೀತಿಯಾಗಿ ಆಡಳಿತ ಚುರುಕುಗೊಳ್ಳುತ್ತದೆ, ಯಾವ ರೀತಿಯಾಗಿ Law & order ಅನ್ನು maintain ಮಾಡುವುದಕ್ಕೆ ಸಾಧ್ಯವಾಗುತ್ತೆಂಬ ಬಗ್ಗೆ ತಾವು ಯೋಜನೆ ಮಾಡಿ. ನಾನು ಟೀಕೆಗೋಸ್ಕರ ಟೀಕೆ ಮಾಡುತ್ತಿಲ್ಲ. ತಾವು ಸ್ಥಳಕ್ಕೆ ಹೋಗಬೇಕು, ನೋಡಬೇಕು. ಅವರಿಗೆ ಸಮಾಧಾನವನ್ನು ಹೇಳಬೇಕು, ಅದನ್ನು ಬಿಟ್ಟು ಧರ್ಮ ಧರ್ಮದಲ್ಲಿ ಜಗಳ ಹಚ್ಚುವುದು, ಜಾತಿ ಜಾತಿಗಳಲ್ಲಿ ಜಗಳ ಹಚ್ಚುವುದು, ಅವರು ಏನೋ convert ಆಗುವುದಕ್ಕೆ ಹೊರಟಿದ್ದಾರೆ, ಅದಕ್ಕೆ ಜನ ರೊಚ್ಚಿಗೆದ್ದರು, ಎಂದು ಹೇಳುವಂಥಾದ್ದು, ಇವು ಸರಿಯಾದುದ್ದಲ್ಲ. ನೂರಾರು ವರ್ಷಗಳಿಂದ ಕ್ರಿಶ್ಚಿಯನ್ಸ್ ಮತ್ತು ಹಿಂದೂಗಳು ಒಳ್ಳೆಯ ಬಾಂಧವ್ಯವನ್ನು ಇಟ್ಟುಕೊಂಡು ಇವತ್ತು ಇದ್ದಾರೆ, ಮತ್ತು ಲಕ್ಷಾಂತರ ವಿದ್ಯಾರ್ಥಿಗಳು ಆ ಸಂಸ್ಥೆಗಳಲ್ಲೇ, ಕಾನ್ವೆಂಟ್ ಶಾಲೆಗೆ ಹೋಗುವಂಥಾದ್ದು. ಅದಕ್ಕೆ ಈ ರೀತಿ ಶಾಂತಿಪ್ರಿಯ ಕರ್ನಾಟಕದಲ್ಲಿ ಧರ್ಮದ ಹೆಸರಿನ ಮೇಲೆ ಜನರನ್ನು divide ಮಾಡಿ, ಅವರಿಗೆ ರಕ್ಷಣೆ ಇಲ್ಲದೇ ಇರುವಂತೆ ಮಾಡುವ ಸರ್ಕಾರವೆಂದರೆ ಇದೇ ಸರ್ಕಾರ. ನಾವು ಏನಾದರೂ ಮಾತನಾಡುವುದಕ್ಕೆ ಹೋದರೆ ನೀವು ಬರೀ ಅಲ್ಪ ಸಂಖ್ಯಾತರ ಬಗ್ಗೆ ಮಾತನಾಡುತ್ತೀರಿ, ಅವರ ಬಗ್ಗೆಯೇ ಹೇಳುತ್ತೀರೆಂದು ಹೇಳುವುದು. ನೀವು ಅವರಿಗೆ ರಕ್ಷಣೆಯನ್ನು ಕೊಡುವುದಿಲ್ಲ. ನಮಗೆ ಮಾತನಾಡುವುದಕ್ಕೂ ಬಿಡುವುದಿಲ್ಲ. ನಾವು ಮಾತನಾಡಿದರೆ ಜಾತಿವಾದಿಗಳು, ನಾವು non-secular, ಆಗಲ್ಲ ಅಂತ ಏನಾದರೂ ಒಂದೊಂದು ಪದ ಕಟ್ಟುವುದು. ನಮಗೆ constitutional ನಲ್ಲಿ secular ಇದೆ. ನಮ್ಮ ಸಂವಿಧಾನದ ಪ್ರಕಾರ ಹೋಗೋಣವೆಂದು ನಾವು ಹೇಳಿದರೆ, ಅಲ್ಲಿ ಪ್ರಚೋದನೆಯನ್ನು ಮಾಡಿ, ನೋಡಿ ಇವರು ಹಿಂದೂಗಳ ವಿರೋಧಿಗಳೆಂದು ಹೇಳುವುದು. ಅಲ್ಲಿ ಎಬ್ಬಿಸಿ ಕೂರಿಸಿ, ನಮ್ಮ ನಮ್ಮಲ್ಲೇ divide

ಮಾಡುವಂಥ ಪ್ರಯತ್ನವನ್ನು vote ಗೋಸ್ಕರ ಮಾಡಿ, law & order ಅನ್ನು ಹದಗೆಡಿಸಿ, ಇವತ್ತು ಅಲ್ಲಿ ಅನ್ಯಾಯ ಮಾಡಿದ್ದಾರೆ. ಇವತ್ತು ಮಂಗಳೂರು ಆಗಲಿ, ಉಡುಪಿಯಾಗಲಿ, ದಾವಣಗೆರೆಯಾಗಲಿ, ಹುಬ್ಬಳ್ಳಿ, ಧಾರವಾಡಗಳಾಗಲಿ, ಕೆಲವು ಕಡೆಗಳಲ್ಲಿ ಎಲ್ಲೆಲ್ಲಿ ಕ್ರಿಶ್ಚಿಯನ್ಸ್ ಅಲ್ಪಸಂಖ್ಯಾತರು ಇದ್ದಾರೆ. ಇವತ್ತು ಅವರು ಹೆದರಿಕೊಂಡು ಅವರು ಮಾತನಾಡುವ ಸ್ಥಿತಿಯಲ್ಲಿ ಇಲ್ಲ, ಮತ್ತು ಸತ್ಯಾಂಶವನ್ನು ಹೊರಗಡೆ ಹೇಳುವುದಕ್ಕೂ ಹೆದರುತ್ತಾರೆ. ನೀವು ಯಾವುದೇ commission ಅನ್ನು ಕಳುಹಿಸಿ, ಅವರ ಮುಂದೆನೂ ಹೇಳಿ ನಾವು ಏನು ಮಾಡೋಣ ಅಂತ ಹೇಳಿ, ಹೇಳುವುದಕ್ಕೂ ಕೂಡ ಹೆದರುತ್ತಾರೆ. ಅದಕ್ಕಾಗಿ ಅದರ ಬಗ್ಗೆ ಇವತ್ತು ಸರ್ಕಾರ ದಿಟ್ಟ ನಿಲುವನ್ನು ತಾಳಬೇಕಾಗಿದೆ. ಇವರ ಎಷ್ಟರ ಮಟ್ಟಿಗೆ ನಿಲುವು ತಾಳುತ್ತಾರೋ, ಗೊತ್ತಿಲ್ಲ ಏಕೆಂದರೆ ಈಗ ಚುನಾವಣೆ ಬಂತು. ಈಗ gap widen ಮಾಡುವುದಕ್ಕೆ ನೋಡುತ್ತಾರೆಯೇ ಹೊರತಾಗಿ ಕೂಡಿಸುವುದನ್ನು ನೋಡುವುದಿಲ್ಲ. ನಾವು ಭಾರತ್ ಜೋಡೋ ಎಂದು ಹೇಳುತ್ತೇವೆ, ಇವರು ಭಾರತ್ ತೋಡೋ ಎನ್ನುತ್ತಾರೆ. ನಿಮ್ಮ ಸ್ಲೋಗನ್ ಏನು ಎಂದರೆ, ನಮ್ಮ ಸ್ಲೋಗನ್ ಭಾರತ್ ಜೋಡೋ ಎಂದರೆ, ನಿಮ್ಮ ಸ್ಲೋಗನ್ ಏನೆಂದರೆ, ಭಾರತ್ ತೋಡೋ ಎಂದು ಹೇಳುತ್ತೀರಿ. ಅದಕ್ಕೆ ಈ ಒಂದು ಫಿಲಾಸಫಿಯನ್ನು ಇಟ್ಟುಕೊಂಡು ಹೋದಿರಿ, ಎಂದರೆ ಮತ್ತೆ ದೇಶದಲ್ಲಿ ತುಕಡಿ, ತುಕಡಿ ಆಗುತ್ತದೆ. ದಯವಿಟ್ಟು ಸಂವಿಧಾನದ ಪ್ರಕಾರ ನಡೆದುಕೊಳ್ಳುವಂಥಾದ್ದನ್ನು ಕಲಿಯಿರಿ. ಸಹಿಷ್ಣುತೆ ಇರಲಿ, brotherhood ಇರಲಿ, compassion ಇರಲಿ, ಎಂದಾಗ ಮಾತ್ರ ನಾವು ಬಾಳಿ ಬದುಕುವುದಕ್ಕೆ ಆಗುತ್ತದೆ. ಎಲ್ಲಾ ದ್ವೇಷದ ರಾಜಕಾರಣ ಮಾಡಿ, ಸಿಟ್ಟಿನ ರಾಜಕಾರಣ ಮಾಡಿ, ನಮ್ಮದೇ ನಡೆಯಬೇಕೆಂದು ಏನಾದರೂ ಮಾಡಿದರೆ, ಅದು ಬಹುಕಾಲ ನಡೆಯುವುದಿಲ್ಲ, ಬಹಳ ದಿವಸ ಇರುವುದಿಲ್ಲ, ಅದಕ್ಕೆ ಒಂದಲ್ಲ ಒಂದು ದಿವಸ ನೀವು ಪಶ್ಚಾತ್ತಾಪವನ್ನು ಪಡಬೇಕಾಗುತ್ತದೆಂಬ ಮಾತನ್ನು ಇವತ್ತಿನ ದಿವಸ ನಾನು ಹೇಳಲಿಚ್ಛಿಸುತ್ತೇನೆ. ಇನ್ನು ಚರ್ಚ್ ಮೇಲೆ ಎಷ್ಟು ಜನರು ದಾಳಿ ಮಾಡಿದವರು? ದತ್ತು ಪೀಠದ ಚಳುವಳಿ ಚಿಕ್ಕಮಗಳೂರಿನಲ್ಲಿ ನಡೆದದ್ದು. ಅಲ್ಲಿ ಆರ್.ಎಸ್.ಎಸ್, ಬಜರಂಗ ದಳದವರ ಮೇಲೆ ಹಾಕಿದಂಥ ಕೇಸನ್ನು ತಾವು withdraw ಮಾಡಿಕೊಂಡಿದ್ದೀರಿ. ಏಕೆ ಮಾಡಿಕೊಂಡಿರಿ? ಯಾರಾದರೂ ದ್ವೇಷ ಭಾವನೆಯಿಂದ ಹಾಕಿದ್ದರಾ? ಸಿಟ್ಟಿನಿಂದ ಹಾಕಿದ್ದರಾ? ಕಾನೂನು ಪ್ರಕಾರ ಯಾರು violate ಮಾಡುತ್ತಾರೋ, ತಪ್ಪು ಮಾಡುತ್ತಾರೋ, ಅವರು ಯಾವುದೇ ಪಕ್ಷದವರೇ ಇರಲಿ, ಕೇಸ್ ಹಾಕಿರುತ್ತಾರೆ. ಆದರೆ ಆ ಎಲ್ಲಾ ಕೇಸ್‌ಗಳನ್ನು

withdraw ಮಾಡಿ, ನೀವು ಏನು ತೋರಿಸಿದ್ದೀರೆಂದರೆ ಬಿ.ಜೆ.ಪಿ. ಸರ್ಕಾರ ಆರ್.ಎಸ್.ಎಸ್. ಪರವಿದೆ. ಬಿ.ಜೆ.ಪಿ. ಸರ್ಕಾರ ಯಾರು ತಪ್ಪು ಮಾಡುತ್ತಾರೆ, ಅವರ ಜೊತೆಯಲ್ಲಿ ಇದೆ. ಯಾರು ಕಾನೂನನ್ನು violate ಮಾಡುತ್ತಾರೆ, ಅವರ ಜೊತೆಯಲ್ಲಿದೆ ಎನ್ನುವಂಥಾದ್ದನ್ನು ಸಾಬೀತು ಮಾಡಿದಿರಿ. ಇಲ್ಲವೆಂದರೆ ಯಾವ ಪಾರ್ಟಿಯವರೇ ಇರಲಿ ಕಾನೂನು ಉಲ್ಲಂಘನೆ ಮಾಡಿದಾಗ ಅವರಿಗೆ Indian Penal Code ಪ್ರಕಾರ, ಈ ದೇಶದ ಸಂವಿಧಾನದ ಪ್ರಕಾರ, Police Act ಪ್ರಕಾರ ಅವರಿಗೆ ಶಿಕ್ಷೆಯಾಗಬೇಕು. ಯಾವುದೋ ತಪ್ಪಿ, ಅಚಾತುರ್ಯ ನಡೆದಿದೆ, ಯಾರೋ ಒಳ್ಳೆಯ ಕಾರ್ಯಕರ್ತನ ಮೇಲೆ ಕೇಸ್ ಹಾಕಿದ್ದಾರೆಂದರೆ, all right ಒಂದೋ, ಎರಡೋ, ಎಲ್ಲೋ ಒಳ್ಳೆಯ ಜನರಿಗೆ ಬೇಕೆಂದೇ ಹೀಗೆ ಮಾಡಿದ್ದಾರೆಂದರೆ, ಅದನ್ನು withdraw ಮಾಡಿದರೂ ಪರವಾಗಿಲ್ಲ. ಆದರೆ en masse ಕೇಸ್‌ಗಳನ್ನು withdraw ಮಾಡಿಕೊಳ್ಳುವುದೆಂದರೆ, ಇದರ directly you are supporting them, you are abetting them; ನೀವು ಹೋಗಿ ಮಾಡಿಕೊಂಡು ಬನ್ನಿ, ನಾವು withdraw ಮಾಡುತ್ತೇವೆ ಎಂದು. As long as we are in power, you do it, we will withdraw. ಬಾರಾ ಖೂನ್ ಮಾಫ್ ನೀವು ಏನೇನು ಮಾಡಿಕೊಂಡು ಬರುತ್ತೀರೋ, ಮಾಡಿಕೊಂಡು ಬನ್ನಿ, ನಾವು ಇಲ್ಲಿ withdraw ಮಾಡಿಕೊಳ್ಳುತ್ತೇವೆ. ಯಾವ ಪೊಲೀಸ್‌ನವರೂ ನಿಮ್ಮನ್ನು touch ಮಾಡುವುದಿಲ್ಲ. ಯಾವ ಪೊಲೀಸ್‌ನವರೂ ನಿಮ್ಮನ್ನು ಕೇಳುವುದಿಲ್ಲ.

ಕೊನೆಗೆ, ಯಾವುದಾದರೂ ಪೊಲೀಸ್ ನಿಮ್ಮ ಮೇಲೆ ಕೇಸ್ ಹಾಕಿದರೆ, F.I.R. ಹಾಕಿದರೆ, charge-sheet ಹಾಕಿದರೆ, here is the Government to protect you, we will withdraw ಎಂದು ಹೇಳಿ ತೋರಿಸಲಿಕ್ಕೆ ಇದನ್ನು ಮಾಡುತ್ತಿದ್ದೀರಿ. ಅಂದರೆ ಇದಕ್ಕೆ ಇನ್ನೂ ನೀವು ಪ್ರೋತ್ಸಾಹ ಕೊಡುತ್ತಿದ್ದೀರಿ. ರೈತರ ಮೇಲೆ ಇದ್ದಂಥ ಕೇಸ್‌ಗಳನ್ನು ನೀವು ವಾಪಸ್ಸು ತೆಗೆದುಕೊಂಡಿದ್ದರೆ ಅದಕ್ಕೆ ಒಂದು ಅರ್ಥ ಇದೆ. ಆದರೆ ರಾಜಕೀಯ ದುರುದ್ದೇಶದಿಂದ, political motive ಇಟ್ಟುಕೊಂಡು ಯಾರು ಮಾಡುತ್ತಾರೋ ಅವರ ವಿರುದ್ಧ ಕೇಸನ್ನು ಹಾಕದೇ ಹೋದರೆ ಖಂಡಿತವಾಗಿ ತಪ್ಪಾಗುತ್ತದೆ. ನಾಳೆ ಎಲ್ಲರೂ ಕೂಡ ಇದೇ ರೀತಿ ಆಗುತ್ತಾರೆ. ಅನೇಕ ಕಡೆ ರೈತರು ಚಳುವಳಿ ಮಾಡುತ್ತಾರೆ, ನಾವು withdraw ಮಾಡುತ್ತೇವೆ, ವಿದ್ಯಾರ್ಥಿಗಳು

ಚಳುವಳಿ ಮಾಡುತ್ತಾರೆ withdraw ಮಾಡುತ್ತೇವೆ, For good cause, wrongly, rightly ಏನೋ ಮಾಡುತ್ತಾರೆ. ಆದರೆ ಇಲ್ಲಿ intentionally ಮಾಡಿದ್ದಕ್ಕೆ ನೀವು ಇವತ್ತಿನ ದಿವಸ withdraw ಮಾಡಿಕೊಂಡು, ಅವರಿಗೆ ಶಹಬಾಸ್‌ಗಿರಿ ಕೊಟ್ಟರೆ ಅವರು ಒಂದು ಊರಿನಲ್ಲಿ, ಒಂದು ಚರ್ಚ್ ಮೇಲೆ ಮಾತ್ರ ಕಲ್ಲು ಹೊಡೆಯುವುದಿಲ್ಲ, ನೂರಾರು ಚರ್ಚ್ ಮೇಲೆ ಕಲ್ಲು ಹೊಡೆಯುತ್ತಾರೆ, ನೂರಾರು ಮಸೀದಿಗಳ ಮೇಲೆ ಕಲ್ಲು ಹೊಡೆಯುತ್ತಾರೆ, ನೂರಾರು ಬಡವರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ. ಅದಕ್ಕೆ ನೀವು ಪ್ರೋತ್ಸಾಹ ಕೊಡಬೇಡಿ. ಅದನ್ನು ನಿಲ್ಲಿಸಿ. ಕಾನೂನಿನ ಹೆದರಿಕೆ ಎಲ್ಲರಿಗೂ ಇರಬೇಕು. ಅವ ಸಣ್ಣವ ಇರಬಹುದು, ದೊಡ್ಡವ ಇರಬಹುದು, ಯಾವುದೇ ಪಕ್ಷದವರು ಇರಬಹುದು. ಕಾನೂನಿನ ಹೆದರಿಕೆ ಇದೆ ಎಂದರೆ ಎಲ್ಲರೂ ಶಿಸ್ತಿನಿಂದ ನಡೆದುಕೊಳ್ಳುತ್ತಾರೆಯೇ ಹೊರತಾಗಿ ಕಾನೂನಿನ ಹೆದರಿಕೆ ಇಲ್ಲ ಎಂದರೆ ಯಾರೂ ಕೂಡ ಶಿಸ್ತನ್ನು ಪಾಲನೆ ಮಾಡುವುದಿಲ, law and order maintain ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ತಾವು ಭಜರಂಗದಳ ಮತ್ತು ಆರ್.ಎಸ್.ಎಸ್. ಜನರ ವಿರುದ್ಧ ಇದ್ದ ಕೇಸುಗಳನ್ನೇನು ವಾಪಸ್ಸು ತೆಗೆದುಕೊಂಡಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಳ್ಳಬಾರದು. ಇದರಿಂದ, ಮುಂದೆ ಅವರಿಗೆ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಅಷ್ಟೇ ಅಲ್ಲ, ಇಂಥಾದ್ದನ್ನು ನೀವು ಮಾಡಿ ಎನ್ನತಕ್ಕಂಥ ಸಂದೇಶ ನಿಮ್ಮಿಂದ ಹೋದ ಹಾಗೆ ಆಗುತ್ತದೆ. ಬೆಂಗಳೂರಿನಲ್ಲೂ ಬಸ್ಸು ಸುಟ್ಟು ಹಾಕಿದರು, ಕರುಣಾನಿಧಿಯವರ ಮಗಳ ಮನೆಯ ಮೇಲೆ ಕಲ್ಲು ಹೊಡೆದರು, ಇವುಗಳಿಗೆ ಸಂಬಂಧಿಸಿದ ಕೇಸುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದರೆ ಅರ್ಥವೇನು? ನಾಳೆ ಯಾವುದೇ ಜನಾಂಗದ ಮೇಲೆ ಕಲ್ಲು ಹೊಡೆದು, ಅವರನ್ನು ಬೇರೆ ರೀತಿಯಿಂದ ಹೀಯಾಳಿಸಿದಂಥ ಜನರಿಗೆ ನೀವು ಶಿಕ್ಷೆ ಕೊಡದೇ, ಅವರ ಮೇಲೆ ಹಾಕಿದ್ದಂಥ ಕೇಸುಗಳನ್ನು ವಾಪಸ್ಸು ತೆಗೆದುಕೊಂಡರೆ, ಅದಕ್ಕೆ ನಾವು ಏನು ಹೇಳಬೇಕು? ಸರ್ಕಾರ ಇದೆಯೋ, ಇಲ್ಲವೋ ಎನ್ನುವಂಥಾದ್ದನ್ನು ನಾವು ಕೇಳಬೇಕಾಗಿದೆ. ತಾವು ಇದರ ಬಗ್ಗೆ ಸ್ಪಷ್ಟವಾದಂಥ ನಿಲುವನ್ನು ಹೇಳಬೇಕು. ಇನ್ನು ಮುಂದೆ ಇಂಥ ಘಟನೆಗಳು ನಡೆಯದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು. ಈಗ ಯಾರು ತಪ್ಪು ಮಾಡಿದ್ದಾರೆ, ಅವರನ್ನು ಮಾತ್ರ ತಾವು ಬಿಡಬಾರದು, ಕೇಸ್‌ಗಳನ್ನು continue ಮಾಡತಕ್ಕಂಥಾದ್ದನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮಗೆ ಸಲಹೆ ಕೊಡುತ್ತೇನೆ.

ಅದರ ಜೊತೆಗೆ ಮತ್ತೊಂದು ವಿಷಯವೆಂದರೆ, "ನಾನು ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಹೋರಾಟ ಮಾಡುತ್ತೇನೆ ಮತ್ತು ನಾವು ಸರ್ವಾಂಗೀಣ ಅಭಿವೃದ್ಧಿಗಾಗಿಯೇ ಇದ್ದೇವೆ" ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ಮತ್ತು ಅದನ್ನು ಅವರು ತಮ್ಮ ಕೈಲಾದಷ್ಟು ತೋರಿಸಿದ್ದಾರೆ ಕೂಡ. ಅಂದರೆ, ಹೇಗೆ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕು ಎನ್ನುವುದನ್ನು ಅವರು ಹೇಳಿದ್ದಾರೆ. ಸರ್ವಾಂಗೀಣ ಅಭಿವೃದ್ಧಿ ಹೇಗೆಂದರೆ, ಇದನ್ನು ತಾವೂ ನೋಡಿರಬೇಕು, ಅಪೆಂಡಿಕ್ಸ್-ಇ. ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಸಣ್ಣ ನೀರಾವರಿ ಇಲಾಖೆ, ನಬಾರ್ಡ್ ಇವೆಲ್ಲ ಇಡೀ ರಾಜ್ಯದ ಅಭಿವೃದ್ಧಿಗಾಗಿ ಮಾಡುತ್ತಾ ಇರತಕ್ಕಂಥ ಕೆಲಸಗಳು. ಇವತ್ತು ತಮ್ಮ ನೋಟಿಸಿಗೆ ತರುತ್ತೇನೆ. ಅದನ್ನು ತಾವು ಒಪ್ಪುತ್ತೀರೋ, ಬಿಡುತ್ತೀರೋ, ಮುಖ್ಯಮಂತ್ರಿಗಳು ಒಪ್ಪುತ್ತಾರೋ, P.W.D. Minister ಒಪ್ಪುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇದು ಇರತಕ್ಕಂಥ fact. 224 ಜನ ಶಾಸಕರನ್ನು ಈ ರಾಜ್ಯದಲ್ಲಿರುವ 5 ಕೋಟಿ 50 ಲಕ್ಷ ಜನರ ಪೈಕಿ ಸುಮಾರು 3 ಕೋಟಿ ಮತದಾರರು ಆರಿಸಿ ಕಳುಹಿಸಿದ್ದಾರೆ. ಸರ್ಕಾರ ಎಂದರೆ ಇಡೀ 5 ಕೋಟಿ 50 ಲಕ್ಷ ಜನರಿಗೆ ಎಂದು ನಾನು ತಿಳಿದುಕೊಂಡಿದ್ದೆ. ಕೇವಲ ಬಿ.ಜೆ.ಪಿ. ಪಕ್ಷದಿಂದ ಆರಿಸಿ ಬಂದಂಥ ಶಾಸಕರಿಗೆ ಮಾತ್ರ ಸರ್ಕಾರ ಇದೆ, ಉಳಿದಂಥ ಸುಮಾರು 100-110 ಜನ ಶಾಸಕರಿಗೆ ಸರ್ಕಾರ ಇಲ್ಲ ಎನ್ನುವುದು ತಮ್ಮ ಭಾವನೆಯಲ್ಲಿದ್ದರೆ ಅದನ್ನು ಹೇಳಬೇಕು. ಮುಂದೆ ಏನಾಗುತ್ತದೋ ಎಂದು ನಾವು ಇನ್ನೊಂದು ಐದು ವರ್ಷ ಕಾಯ್ದು ನೋಡೋಣ. ಆದರೆ ನೀವು ಮಾಡಿದ್ದೇನು? ಹೇಳುವುದು ಒಂದು, ಮಾಡುವುದು ಒಂದು. ಅಭಿವೃದ್ಧಿಯ ಹೆಸರಿನಲ್ಲಿ ನೀವು ಹಣ ಹಂಚಿದ್ದೀರಿ. ಹೇಗೆ ಹಂಚಿದ್ದೀರಿ ಎಂದರೆ, ಶೀರ್ಷಿಕೆ ಸಂಖ್ಯೆ 5054 - ಸೇತುವೆಗಳು : ದಕ್ಷಿಣ ಮತ್ತು ಉತ್ತರ. ರಾಜ್ಯದ ಒಟ್ಟು ಅನುದಾನ ಮತ್ತು ಅದರಲ್ಲಿ ಅಂದಾಜು ಮೊತ್ತ ಈ ಶೀರ್ಷಿಕೆಯಲ್ಲಿ 29 ಕೋಟಿ 36 ಲಕ್ಷ ರೂಪಾಯಿಗಳು. ಅದರಲ್ಲಿ ಬಿ.ಜೆ.ಪಿ. ಕ್ಷೇತ್ರದ ಶಾಸಕರಿಗೆ ನೀಡಿರುವ ಅನುದಾನ ಎಷ್ಟೆಂದರೆ, ಅಂದಾಜು ಮೊತ್ತ 20 ಕೋಟಿ 86 ಲಕ್ಷ ರೂಪಾಯಿಗಳು. ಅದರಲ್ಲಿ ಶಿಕಾರಿಪುರ ಮತ್ತು ಶಿವಮೊಗ್ಗದ ಸ್ವಲ್ಪ ಭಾಗಕ್ಕೆ 16 ಕೋಟಿ 31 ಲಕ್ಷ ರೂಪಾಯಿಗಳು ಕೊಟ್ಟಿದ್ದಾರೆ. ಇದು ಸರ್ವಾಂಗೀಣ ಅಭಿವೃದ್ಧಿ! 29 ಕೋಟಿ ರೂಪಾಯಿಗಳಲ್ಲಿ 20 ಕೋಟಿ ರೂಪಾಯಿಗಳ ಅಂದಾಜು ಮೊತ್ತವನ್ನು ಬಿ.ಜೆ.ಪಿ. ಕ್ಷೇತ್ರದ ಶಾಸಕರುಗಳಿಗೆ ಕೊಟ್ಟಿದ್ದು, ಅದರಲ್ಲಿಯೂ 16 ಕೋಟಿ ರೂಪಾಯಿಗಳನ್ನು ಶಿಕಾರಿಪುರ ಮತ್ತು

ಶಿವಮೊಗ್ಗದ ಕೆಲವು ಭಾಗಗಳಿಗೆ ನೀಡಲಾಗಿದೆ. ಅದೂ ಕೂಡ ಶಿವಮೊಗ್ಗಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಅದೇ ರೀತಿ, ಇತರ ರಸ್ತೆ ನಿರ್ಮಾಣ - ದಕ್ಷಿಣ ಮತ್ತು ಉತ್ತರ. ಇದರ ಅಂದಾಜು ಎಷ್ಟೆಂದರೆ 641 ಕೋಟಿ ರೂಪಾಯಿಗಳು. ಅದರಲ್ಲಿ ಬಿ.ಜೆ.ಪಿ. ಕ್ಷೇತ್ರದ ಶಾಸಕರಿಗೆ ಅಲಾಟ್ ಆಗಿದ್ದು 560 ಕೋಟಿ 57 ಲಕ್ಷ ರೂಪಾಯಿಗಳು. 641 ಕೋಟಿ ರೂಪಾಯಿಗಳಲ್ಲಿ 560 ಕೊಟಿ ರೂಪಾಯಿಗಳನ್ನು ಬರೀ ಬಿ.ಜೆ.ಪಿ. ಕ್ಷೇತ್ರದ ಶಾಸಕರಿಗೆ ಕೊಡಲಾಗಿದೆ. ಅದರಲ್ಲಿ ಶಿವಮೊಗ್ಗಕ್ಕೆ ಸುಮಾರು 239 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅನುದಾನ ಕೊಟ್ಟಿದ್ದು 71 ಕೋಟಿ 98 ಲಕ್ಷ ರೂಪಾಯಿಗಳು. ಅಂದರೆ $1/3^{rd}$ ಪ್ರಕಾರ ಕೊಟ್ಟಿದ್ದಾರೆ. ಇದು, ರಸ್ತೆ ನಿರ್ಮಾಣ ಮತ್ತು ಶೀರ್ಷಿಕೆ 5054ನಲ್ಲಿ ಇರುವಂಥಾದ್ದು. ಅದೇ ರೀತಿ, ಶೀರ್ಷಿಕೆ 4059 ನಲ್ಲಿ ನ್ಯಾಯಾಲಯ ಕಟ್ಟಡ, ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕ್ವಾರ್ಟರ್ಸ್, ಜ್ಯುಡಿಷಿಯಲ್ ಇವುಗಳಿಗೆ ಇತರಕ್ಕಂಥ ಒಟ್ಟು ಅಂದಾಜು ಮೊತ್ತ 20 ಕೋಟಿ 45 ಲಕ್ಷ ರೂಪಾಯಿಗಳು. ಅದರಲ್ಲಿ ಬಿ.ಜೆ.ಪಿ. ಕ್ಷೇತ್ರದ ಶಾಸಕರಿಗೆ 17 ಕೋಟಿ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇತರರಿಗೆ ಕೊಟ್ಟಿದ್ದು ಕೇವಲ 93 ಲಕ್ಷ ರೂಪಾಯಿಗಳು. ಅದರಲ್ಲಿ ಶಿವಮೊಗ್ಗಕ್ಕೆ ಕೊಟ್ಟಿದ್ದು 5 ಕೋಟಿ ರೂಪಾಯಿಗಳು. ಅದರಲ್ಲಿ ಈಗಾಗಲೆ 1 ಕೋಟಿ 50 ಲಕ್ಷ ರೂಪಾಯಿಗಳ ಅನುದಾನವನ್ನು ಅದಕ್ಕೆ ಇಟ್ಟಿದ್ದಾರೆ. ದಕ್ಷಿಣ ಮತ್ತು ಉತ್ತರ ವಲಯದಲ್ಲಿ ಅದೇ ಕಟ್ಟಡಕ್ಕೆ ಇರುವ ಅಂದಾಜು ಮೊತ್ತ 12 ಕೋಟಿ 92 ಲಕ್ಷ ರೂಪಾಯಿಗಳು.

ಬಿಜೆಪಿ ಮತಕ್ಷೇತ್ರದಲ್ಲಿ ಕೊಟ್ಟಿದ್ದು ರೂ.9 ಕೋಟಿ 12 ಲಕ್ಷ, ಅದರಲ್ಲಿ ಪುನ: ಶಿವಮೊಗ್ಗಕ್ಕೆ 70 ಲಕ್ಷ ರೂಪಾಯಿಗಳು. 4059 PWD ಕಟ್ಟಡಗಳು Head ನಲ್ಲಿ ರೂ.44 ಕೋಟಿ 85 ಲಕ್ಷ estimate ಮಾಡಿದ್ದಾರೆ. ಅದರಲ್ಲಿ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ರೂ.32 ಕೋಟಿ 60 ಲಕ್ಷ estimate ಮಾಡಿದ್ದಾರೆ ಹಾಗೂ ಕಾಂಗ್ರೆಸ್ ಮತ್ತು ಜನತಾದಳದ ಶಾಸಕರಿಗೆ ಕೇವಲ ರೂ.4 ಕೋಟಿ 75 ಲಕ್ಷ. ಅದರಲ್ಲಿ ಅನುದಾನ ಬಿಡುಗಡೆಗೆ provision ಮಾಡಿದ್ದು ರೂ.1 ಕೋಟಿ 72 ಲಕ್ಷ. ಅಂದರೆ 100 ಶಾಸಕರಿಗೆ ರೂ.1 ಕೋಟಿ 72 ಲಕ್ಷ, ಬಿಜೆಪಿ ಶಾಸಕರಿಗೆ ಸುಮಾರು ರೂ. 3 ಕೋಟಿ ಅನುದಾನ ಮತ್ತು ಶಿವಮೊಗ್ಗಕ್ಕೆ ಸುಮಾರು ರೂ. 14 ಕೋಟಿ 75 ಲಕ್ಷ, ಅದರಲ್ಲಿ ಇದು ಶಿವಮೊಗ್ಗ ಜಿಲ್ಲಾ ಅನುದಾನ. ಇನ್ನು ಮಾರಾಟ ತೆರಿಗೆ, ಕಟ್ಟಡ ಕಟ್ಟುವುದಕ್ಕೆ 4 ಕೋಟಿ ರೂಪಾಯಿ, ಆ 4 ಕೋಟಿ ರೂಪಾಯಿ ಸಹ ಪೂರ್ತಿಯಾಗಿ ಶಿವಮೊಗ್ಗಕ್ಕೆ ಬಿಡುಗಡೆಯಾಗಿದೆ. ಆಮೇಲೆ ಖಜಾನಾ ಕಟ್ಟಡ, Treasury

office ಮುಂತಾದುವಕ್ಕೆ 1 ಕೋಟಿ 35 ಲಕ್ಷ ರೂಪಾಯಿಗಳಲ್ಲಿ ಅದರಲ್ಲೂ ಕೂಡ ಬಿಟ್ಟಿಲ್ಲ. ಶಿಕ್ಷಣ ಇಲಾಖೆ (ಉತ್ತರ) ರೂ.7 ಕೋಟಿ 25 ಲಕ್ಷ estimate, ಅನುದಾನ ಇಟ್ಟಿದ್ದು ರೂ.2 ಕೋಟಿ 17 ಲಕ್ಷ, ಬಿಜೆಪಿ ಶಾಸಕರಿಗೆ ರೂ.7 ಕೋಟಿ 25 ಲಕ್ಷ, ಆ 7 ಕೋಟಿ 25 ಲಕ್ಷ ರೂಪಾಯಿಗಳು ಪೂರ್ತಿಯಾಗಿ ಹಾನಗಲ್ ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ. ಇದು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಇಟ್ಟಂಥ ಬಜೆಟ್! ನಂತರ, ಕಾಲೇಜು ಶಿಕ್ಷಣ(ದಕ್ಷಿಣ)- ರೂ.18 ಕೋಟಿ 80 ಲಕ್ಷ, ಅದರಲ್ಲಿ ಬಿಜೆಪಿ ಶಾಸಕರಿಗೆ ರೂ.11 ಕೋಟಿ 80 ಲಕ್ಷ ಮತ್ತು ರೂ.7 ಕೋಟಿ ಮಾತ್ರ ಉಳಿದ 110 ಶಾಸಕರಿಗೆ. ತಾಂತ್ರಿಕ ಶಿಕ್ಷಣದಲ್ಲಿ ರೂ.15 ಕೋಟಿ 25 ಲಕ್ಷ ಮೊತ್ತ, ಅದರಲ್ಲಿ ಸುಮಾರು 12 ಕೋಟಿ ರೂಪಾಯಿಗಳು ಕೇವಲ ಬಿಜೆಪಿ ಶಾಸಕರಿಗೆ, ಕೇವಲ 97 ಲಕ್ಷ ರೂಪಾಯಿ ಗಳು ಮಾತ್ರ ಇತರೆ ಶಾಸಕರಿಗೆ. ಅದೇ ರೀತಿಯಾಗಿ ಇತರೆ ಇಲಾಖೆಯಲ್ಲಿ ರೂ.27 ಕೋಟಿ 75 ಲಕ್ಷ ಇಟ್ಟಿದ್ದು, ಇದರಲ್ಲಿ ಬಿಜೆಪಿ ಶಾಸಕರಿಗೆ ರೂ.14 ಕೋಟಿ 75 ಲಕ್ಷ, ಅದರಲ್ಲಿಯೂ ಶಿವಮೊಗ್ಗಕ್ಕೆ ರೂ.13 ಕೋಟಿ 40 ಲಕ್ಷ. ಅಂದರೆ ಉಳಿದ ಎಲ್ಲಾ ಶಾಸಕರಿಗೆ ರೂ.1 ಕೋಟಿ, ಬರೀ ಶಿವಮೊಗ್ಗಕ್ಕೆ ರೂ. 13 ಕೋಟಿ. ಇನ್ನು 4216-ಇತರೆ ಇಲಾಖೆ : ರೂ.9 ಕೋಟಿ, ಈ 9 ಕೋಟಿ ಮೊತ್ತದಲ್ಲಿ ರೂ.2 ಕೋಟಿ 27 ಲಕ್ಷ ಅನುದಾನ, ಬಿಜೆಪಿ ಶಾಸಕರಿಗೆ ರೂ.7 ಕೋಟಿ 80 ಲಕ್ಷ ಮೊತ್ತ, ಬಿಡುಗಡೆಯಾದ ಅನುದಾನ ರೂ.2 ಕೋಟಿ 34 ಲಕ್ಷ, ಆದರೆ, ಇತರೆ ಎಲ್ಲಾ ಶಾಸಕರಿಗೆ ರೂ. 36 ಲಕ್ಷ, ಶಿವಮೊಗ್ಗಕ್ಕೆ ರೂ.4 ಕೋಟಿ. ನಾನು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನೀವು ಇಡೀ ಸದನಕ್ಕೆ ಟೋಪಿ ಹಾಕಿದ್ದೀರಿ, ನೀವಿಬ್ಬರು ಮಾತ್ರ ಗುಲಾಬಿ ಮಕ್ಮಲ್ ಟೋಪಿ ಹಾಕಿಕೊಂಡು ಕುಳಿತಿದ್ದೀರಿ. ಎಲ್ಲಾ ಸದಸ್ಯರಿಗೆ, ಸ್ವಲ್ಪ ಹೆಚ್ಚು ಇರಬಹುದು, ಸ್ವಲ್ಪ ಕಡಿಮೆ ಇರಬಹುದು, ಈ ಕಡೆಗಂತೂ ಪೂರ್ಣ neglect ಮಾಡಿದ್ದೀರಿ. ನಾನು ಹೇಳಿದ್ದೇನೆ ಆ ಕಾಗದ ಬೇಕಾದರೆ ಕೊಡುತ್ತೇನೆ. Appendix E ನಲ್ಲಿ ಏನು ಕೊಟ್ಟಿದ್ದೀರಿ ಅದರಿಂದ ತೆಗೆದು ಇಲ್ಲಿ ಹೇಳುತ್ತಿದ್ದೇನೆ. ಈ ರೀತಿಯಾಗಿ ಅನ್ಯಾಯ ಯಾರೂ ಮಾಡಿಲ್ಲ. Yes, ಮಾಡುತ್ತಾರೆ,

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡು ಮಿನಿಟ್‌ನಲ್ಲಿ ಅವರಿಗೆ ಉತ್ತರ ಹೇಳಿಬಿಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಈ ಮಾತನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇಷ್ಟೊಂದು discrimination ಅನ್ನು blind ಆಗಿ

ಯಾರೂ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ಮಾಡುವುದೂ ಇಲ್ಲ. Yes, ಕೊಡುತ್ತಾರೆ, grant ಕೊಡುವಾಗ ಒಬ್ಬರು ರೂ. 2 ಕೋಟಿ grant ತೆಗೆದುಕೊಂಡರೆ ಇನ್ನೊಬ್ಬರಿಗೆ ರೂ.1 ಕೋಟಿ, ರೂ. 1.5 ಕೋಟಿ ಈ ತರಹ ಮಾಡಬಹುದು. ಆದರೆ, ಇದು ಸಾರಾಸಗಟಾಗಿ 100 ಎಂ.ಎಲ್.ಎ.ಗಳಿಗೆ ಏನೂ ಇಲ್ಲ. ಅವರ ಪಕ್ಷದ ಎಂಎಲ್ಎಗಳಿಗೆ ಕೊಡುವಾಗ ಅಲ್ಲಿಯೂ ಕೂಡ discrimination ನಡೆದಿದೆ. ಅವರಿಗೆ ಪಾಪ ಧೈರ್ಯ ಇಲ್ಲದಿರುವುದರಿಂದ ಹೇಳುವುದಕ್ಕಾಗುವುದಿಲ್ಲ. ಹಾಗಾಗಿ ಅವರು ಆಡಳಿತ ಪಕ್ಷದ ಪರವಾಗಿಯೇ ಹೇಳಬೇಕಾಗುತ್ತದೆ, ಇಲ್ಲವೆಂದರೆ ಅವರು ಆ ಪಕ್ಷದಲ್ಲಿರುವುದಕ್ಕಾಗುತ್ತದೆಯೇ? ಆ ರೀತಿ ಏನಾದರೂ ಹೇಳಿದರೆ ಕೆಲಸವೂ ಆಗುವುದಿಲ್ಲ ಏನೂ ಆಗುವುದಿಲ್ಲ. ನಮ್ಮ ಹಾಗೆ ಆಡಳಿತ ಪಕ್ಷದ ಸದಸ್ಯರು ಮಾತನಾಡಿದರೆ ಅವರ ಕೆಲಸ ಆಗುವುದಿಲ್ಲ. ಹಾಗಾಗಿ, naturally ಅವರೆಲ್ಲ ಸರಿಯಿದೆಯೆಂದು ಹೇಳುತ್ತಾರೆ. ಈಗ ಏನು ಹೇಳುತ್ತೇನೆ ಅದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ಭಾವಿಸುತ್ತೇನೆ. PWD South Zone Appendix-E Part I 2008-09 : under Head of account 5054 ನಿಂದ ಹಿಡಿದುಕೊಂಡು 172. Roads and bridges total estimate of amount Rs. 231,16,56,000 for 302 works. out of which provisions have been made to Shimoga Rs. 61,25,00,000 ಶಿವಮೊಗ್ಗಕ್ಕೆ 7 ಕೆಲಸ, ಹೊಳೆಹೊನ್ನೂರು 2, ಶಿಕಾರಿಪುರ 22, ಏನು ಸರ್? ಒಮ್ಮೆಲೇ ಇಷ್ಟು ತಿಂದರೆ ಜೀರ್ಣ ಹೇಗೆ ಆಗುತ್ತದೆ? ಜೀರ್ಣವಾಗುವ ಹಾಗೆ ತಿಂದರೆ ಅಡ್ಡಿಯಿಲ್ಲ.

ಡಾ॥ ಬಿ.ಎಸ್. ಯಡಿಯೂರಪ್ಪ :- ನಿಮ್ಮದೆಲ್ಲ ವಿವರವನ್ನು ನಾನೂ ಸಹ ಉತ್ತರ ಕೊಡುವಾಗ ಹೇಳುತ್ತೇನೆ. ಏನೇನು ಮಾಡಿದ್ದೀರೆಂದು ನಿಮ್ಮ ಜಾತಕ ಸಹ ಇಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆಯಿತು, ಕೊಡಿ. ನಮ್ಮ ಜಾತಕ ಇರಲಿ ಸರ್. ಶಿಕಾರಿಪುರ 22, ತೀರ್ಥಹಳ್ಳಿ ಇಲ್ಲ, ಹೊಸನಗರ 6, total 42.

ಶ್ರೀ ಸಿ.ಎಂ. ಉದಾಸಿ :- ಒಂದು ನಿಮಷ. ನಾನು ಹೇಳಿಬಿಡುತ್ತೇನೆ. 10 ನಿಮಿಷ ಅವಕಾಶ ಕೊಡಿ. ಇದರಿಂದ ನಿಮಗೇ ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆಮೇಲೆ ಹೇಳಿ. ನೀವು ಹೇಳುವಾಗ ಅಲ್ಲಿ ಎಲ್ಲ feed ಮಾಡುತ್ತಾರೆ, ಆಗ ಹೇಳಿ. ನನಗೇನೂ ಅನುಕೂಲವಾಗುವುದಿಲ್ಲ. ನೀವು ಏನು ಅನುಕೂಲ ಮಾಡಿಕೊಡುತ್ತೀರಿ? ನೀವು ಅನುಕೂಲ ಮಾಡಿಕೊಟ್ಟರೆ ನಾನು ಅಲ್ಲಿಯೇ(ಆಡಳಿತ ಪಕ್ಷದ ಭಾಗದಲ್ಲಿ) ಕುಳಿತುಬಿಡುತ್ತೇನೆ. ಇನ್ನು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ: ಇದರಲ್ಲೂ ಕೂಡ ತಾವು ಹೆಚ್ಚುಕಡಿಮೆ ನಿಮ್ಮ ಜಿಲ್ಲೆಗೇ ಬಿಡುಗಡೆ ಮಾಡಿದ್ದೀರಿ. ನಿಮ್ಮ ಜಿಲ್ಲೆಗೆ ಮಾಡಬಾರದೆಂದು ಹೇಳುವುದಿಲ್ಲ. It should be judiciously done ನೀವು ಒಬ್ಬ ಮುಖ್ಯಮಂತ್ರಿಗಳಾಗಿದ್ದೀರಿ, PWD Minister ಇದ್ದೀರಿ, ನಿಮ್ಮ ಕ್ಷೇತ್ರಗಳಿಗೆ ನೀವೆಷ್ಟು ಮಾಡಿಕೊಳ್ಳಬೇಕು? Yes, ಒಂದು dam ಇರುತ್ತದೆ, ಅದಕ್ಕೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ, ಮಾಡಿ. ಏಕೆಂದರೆ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲವಲ್ಲ? ಇನ್ನು ಆಲಮಟ್ಟಿ ಕ್ಷೇತ್ರ ಯಾರಿಗೋ ಬರುತ್ತಿತ್ತು ಎಂದರೆ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರೆಂದು ಆಪಾದನೆ ಮಾಡುವುದಕ್ಕೆ ಬರುತ್ತದೆಯೇ? ನಾರಾಯಣಪುರ ಡ್ಯಾಂ ಕಟ್ಟಿಸಿರುವವರಿಗೆ ಆಪಾದನೆ ಮಾಡುವುದಕ್ಕೆ ಬರುತ್ತದೆಯೇ? ಅಥವಾ ಮಲಪ್ರಭಾ ಯಾರದೋ ಕ್ಷೇತ್ರದಲ್ಲಿ ಬರುತ್ತದೆಂದು ಅಲ್ಲಿ ಕೋಟಿಗಟ್ಟಲೆ ಹಣ ಕೊಟ್ಟಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ? ಇದು ರಸ್ತೆಗಳು, ಸೇತುವೆಗಳು, ಕಟ್ಟಡಗಳು, ಸಣ್ಣಪುಟ್ಟ ಕೆಲಸಗಳು ಎಲ್ಲಾ ಕ್ಷೇತ್ರಗಳಲ್ಲಿ ಆಗಬೇಕೆನ್ನುವ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು, ಸಣ್ಣಪುಟ್ಟ ಕೆರೆಗಳನ್ನು ನೋಡಿದಾಗ, ಇದರಲ್ಲಿ ಒಟ್ಟು ಮಂಜೂರಾತಿ ರೂ.417 ಕೋಟಿ ರೂಪಾಯಿಗಳು, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಂಜೂರು ಮಾಡಿಕೊಂಡಂಥ ಹಣ 252 ಕೋಟಿ ರೂಪಾಯಿಗಳ worth ಕೆಲಸ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದು ಒಂದು ಕಡೆ ಆಯಿತು. ಏನೋ ಮುಖ್ಯಮಂತ್ರಿಗಳು ಬಹಳ ದಿವಸಗಳಿಂದ ಅವರ ಮತ ಕ್ಷೇತ್ರಕ್ಕೆ ಸ್ವರ್ಗ ಮಾಡಬೇಕೆಂದು ಹೊರಟಿದ್ದಾರೆ, ಮಾಡಿದರೂ ಅದು ಒಂದು. ಆದರೆ, PWD Minister ರವರೂ ಸಹ ಹಾಗೆಯೇ ಮಾಡಿದರು. PWD Minister 245 ಕೋಟಿ ರೂಪಾಯಿಗಳಲ್ಲಿ ಹಾವೇರಿ ಜಿಲ್ಲೆಗೆ, ತಮ್ಮ ಕ್ಷೇತ್ರಕ್ಕೆ 61 ಕೋಟಿ 40 ಲಕ್ಷ ರೂಪಾಯಿಗಳನ್ನು ಸೇತುವೆ ನಿರ್ಮಾಣ, ಇತರೆ ರಸ್ತೆಗಳ ನಿರ್ಮಾಣ, ಇತರೆ ರಸ್ತೆಗಳಿಗೆ ಕೊಟ್ಟಿದ್ದಾರೆ. ಅವರು ಮತ್ತೊಂದು ಏನು ಮಾಡಿದ್ದಾರೆಂದರೆ, Appendix - E ನಲ್ಲಿ ಹಾಕುವಾಗಲೂ ಕೂಡ, NABARD ಕೆಲಸಗಳಲ್ಲೂ ಕೂಡ ಅಲ್ಲೊಂದು ಇಲ್ಲೊಂದು ಹಾಕಿದ್ದಾರೆ. ಏಕೆಂದರೆ, ಒಂದೇ Serial ನಲ್ಲಿ ಬಂದರೆ 20 ಕೆಲಸಗಳು ಒಟ್ಟಿಗೆ ಕಣ್ಣಿಗೆ ಬೀಳುತ್ತದೆ. ಅದಕ್ಕೆ

ಒಂದು ಅಲ್ಲಿ ತೋರಿಸುವುದು, ನಾಲ್ಕು ಇಲ್ಲಿ ತೋರಿಸುವುದು ಮಾಡಿ NABARD List ನಲ್ಲಿ ಹೆಚ್ಚು ಕಡಿಮೆ ಮಾಡಿ ಕೊನೆಯ ಪೇಜ್‌ನವರೆಗೆ ನೋಡಿದರೂ ಅವರ ಕೆಲಸಗಳೇ ಇವೆ. ಸಂತೋಷ. ಇಷ್ಟೊಂದು ಅಜೀರ್ಣವಾಗುವಷ್ಟು ತೆಗೆದುಕೊಂಡರೆ ಬೇರೆಯವರ ಗತಿ ಏನು? ಸಾಮಾನ್ಯವಾಗಿ ಇಡೀ ರಾಜ್ಯದ 5 ಕೋಟಿ ಜನರ ಹಣವನ್ನು ಎಲ್ಲಾ ಕ್ಷೇತ್ರಗಳಿಗೆ ಸಮನಾಗಿ ಕೊಡುತ್ತಾರೆ. ಎಲ್ಲರಿಗೂ ಕೂಡ ಸರಿಸಮಾನವಾಗಿ ಬರದಿದ್ದರೂ ಕೂಡ at least ತೃಪ್ತಿಯಾಗುವ ರೀತಿಯಲ್ಲಿ ಎಲ್ಲಿ need-based ಇದೆ ಅದಾದರೂ ಮಾಡಬೇಕಲ್ಲವೇ? ಆದರೆ, ಆ need-based ಇಲ್ಲ. ಎರಡನೆಯದಾಗಿ, ದಕ್ಷಿಣ ವಲಯದ ಬಗ್ಗೆ ಕೂಡ ನಾನು ಹೇಳಿದ್ದೇನೆ. ಮತ್ತೆ ಅದರ ಬಗ್ಗೆ ನಾನು ಸವಿಸ್ತಾರವಾಗಿ ಹೇಳುವುದಿಲ್ಲ. ಅನೇಕ ಮಾಹಿತಿಗಳಿವೆ. ಎಲ್ಲಾ ಹೇಳುತ್ತಾ ಹೋದರೆ, ಪೂರ್ತಿಯಾಗಿ Appendix-E ಅನ್ನೇ ನಿಮ್ಮ ಮುಂದಿಟ್ಟ ಹಾಗೆ ಆಗುತ್ತದೆ. ಅದಕ್ಕಾಗಿ ನಾನು ಹೆಚ್ಚಿನ ವಿಷಯ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು, discrimination ಏನಾಗಿದೆ, ಇದನ್ನು ಸರಿಪಡಿಸುತ್ತಾರೆ ಎಂದು ನಾನು ಭಾವಿಸಿದ್ದೇನೆ. ಇದಕ್ಕೆ ವಾದಕ್ಕೆ ವಾದ ಎಂದು ಹಿಂದೆ ಹೀಗೆ ಕೊಟ್ಟರು, ಮುಂದೆ ಹಾಗೆ ಕೊಟ್ಟರು, ನಾನೂ ಹೀಗೆ ಮಾಡುತ್ತೇನೆ ಎಂದು ಹೇಳಿದರೆ ಇದು ನಿಮ್ಮ ಹಣೆಬರಹ. ಈ discrimination ಅನ್ನು ಸರಿಪಡಿಸಬೇಕು. ಪ್ರತಿಯೊಂದು ಕೆಲಸದಲ್ಲಿ ಇವತ್ತಿನ ದಿವಸ ವ್ಯತ್ಯಾಸವೇನಾಗಿದೆ ಮತ್ತು one-side ಏನಾಗಿದೆ ಅಂದರೆ ಕೆಲವೇ ಎಂ.ಎಲ್.ಎಗಳಿಗೆ ಕೊಟ್ಟು, ಕೆಲವು ಎಂ.ಎಲ್.ಎ.ಗಳನ್ನು ಬಿಟ್ಟರು. ವಿರೋಧ ಪಕ್ಷದ ಎಂ.ಎಲ್.ಎ.ಗಳನ್ನು ಒಂದು ರೀತಿಯಲ್ಲಿ ತುಳಿಯತಕ್ಕಂಥದ್ದು, ಹೆದರಿಸತಕ್ಕಂಥದ್ದು ಇದೆ. ಅದಕ್ಕಾಗಿಯೇ ಬಹಳ ಜನ ಎಂ.ಎಲ್.ಎ.ಗಳು ರಾಜೀನಾಮೆ ಕೊಟ್ಟು ಬಿಜೆಪಿಯಿಂದ ಚುನಾವಣೆಗೆ ನಿಂತರು. ಆಗ ಅವರು first ಏನು ಹೇಳಿದರೆಂದರೆ, ನಾವು ಅಭಿವೃದ್ಧಿಗೋಸ್ಕರ ಕಾಂಗ್ರೆಸ್ ಪಾರ್ಟಿಯನ್ನು ಬಿಟ್ಟು ಬಿಜೆಪಿಗೆ ಹೋಗುತ್ತೇವೆ, ಜೆಡಿ(ಎಸ್) ಬಿಟ್ಟು ಬಿಜೆಪಿಗೆ ಹೋಗುತ್ತೇವೆ ಎಂದು ಹೇಳಿದ್ದು ಈ harassment ನಿಂದ. ಕಾನೂನನ್ನು ಕೈಗೆತ್ತಿಕೊಂಡು indiscriminately behave ಮಾಡಿ, ದ್ವೇಷದ ರಾಜಕಾರಣ ಮಾಡಿ ಇವತ್ತಿನ ದಿವಸ ಕೊನೆಗೆ ಆ ಪಾರ್ಟಿಗೆ ಹೋದರೆ ನಮ್ಮ ಕೆಲಸವಾಗುತ್ತದೆ ಇಲ್ಲದಿದ್ದರೆ ಇಲ್ಲ, ನನ್ನ ಕ್ಷೇತ್ರದ ಕೆಲಸವಾಗಬೇಕೆಂದರೆ ಆ ಪಾರ್ಟಿಗೆ ಸೇರಬೇಕು. ಈ ರೀತಿಯಾದ democracy ಇದೆ. ಇದು ಪ್ರಜಾಪ್ರಭುತ್ವ ಹೆದರಿಸಿ, ಬೆದರಿಸಿ, ಕೆಲಸದ ಆಮಿಷ ತೋರಿಸಿ, ಹಣದ ಆಮಿಷ ತೋರಿಸಿ, ಇವತ್ತಿನ ದಿವಸ ತಾವು ಈ ಕೆಲಸ ಮಾಡಿದರೆ ಇದು ಯಾರಿಗೆ ಶೋಭೆ

ತರುತ್ತದೆ? ಈ ರೀತಿಯಾದರೆ ಪ್ರಜಾಪ್ರಭುತ್ವ ಏಕೆ ಬೇಕು? ನೀವೇ ಒಂದು ಸಲ 224 ಜನ ಆರಿಸಿ ಬಂದು ಆಳಿ ನೋಡಿ, ಅದು ಎಷ್ಟು ದಿವಸ ಇರುತ್ತದೆ ನೋಡೋಣ? ಇದು ಸರಿಯಲ್ಲ. ನೀವು ಆ ಜಾಗದಲ್ಲಿದ್ದಾಗ, ಮುಖ್ಯಮಂತ್ರಿಯಾಗಿದ್ದಾಗ, ಎಲ್ಲರನ್ನು ಸಮದೃಷ್ಟಿಯಿಂದ ನೋಡಬೇಕು. ಅದನ್ನು ಬಿಟ್ಟು ಬಿಜೆಪಿ MLA ಗೆ ಒಂದು, ಕಾಂಗ್ರೆಸ್‌ನವರಿಗೇ ಒಂದು, ಜೆಡಿ(ಎಸ್)ನವರಿಗೇ ಒಂದು, ಮತ್ತೆ ಬಿಜೆಪಿಯಲ್ಲಿ ನಿಮ್ಮದೇ ಒಂದು, ಉದಾಸಿಯವರದೇ ಒಂದು, ಈ ರೀತಿಯಾಗಿ ತಾರತಮ್ಯ ನಡೆದಿದೆ. NABARD ಕೆಲಸದಲ್ಲಿಯೂ ಕೂಡ Minor Irrigation ಆಗಬಹುದು, ಬೇರೆ ಕೆಲಸವಾಗಿರಬಹುದು, ಅಲ್ಲೂ ಕೂಡ 300 ಕೋಟಿ ರೂಪಾಯಿಗಳ estimate ಕೆಲಸದಲ್ಲಿ ಇವರು ಹೆಚ್ಚು ಕಡಿಮೆ ಮಾಡಿ ಹಾವೇರಿಗೆ 19 ಕೋಟಿ ರೂ., ಅವರು 14 ಕೋಟಿ ರೂ., ಕೊಟ್ಟಿದ್ದು ಇಬ್ಬರೂ ಕೊಟ್ಟ ಹಣ ಸೇರಿ ಸುಮಾರು 40-50 ಕೋಟಿ ರೂಪಾಯಿಗಳಷ್ಟಾಯಿತು. ಇದು ಇಡೀ ರಾಜ್ಯಕ್ಕೆ ಸಿಕ್ಕಿದ ಹಾಗೆ ಆಯಿತೆ? ನನ್ನ ಹತ್ತಿರ ಇರುವ ಮಾಹಿತಿಯನ್ನು ಕೊಡುತ್ತೇನೆ. ಬೇಕಾದರೆ ನೋಡಿ. ಯಾರಾದರೇನು? ಮಾನ್ಯ ಮುಖ್ಯಮಂತ್ರಿಯವರು ಸ್ವಲ್ಪ ತಮ್ಮ ಮತಕ್ಷೇತ್ರವನ್ನು ಭದ್ರಪಡಿಸಿಕೊಳ್ಳಬೇಕೆಂದು ಏನಾದರೂ ಮಾಡಿಕೊಂಡಿರಬೇಕು ಎನ್ನುವ ಭಾವನೆ ನನಗಿತ್ತು. ಆದರೆ, ಇದು ಇಲ್ಲಿಗೇ ಸೀಮಿತವಾಗಿಲ್ಲ. Rural Development ಗೂ ಬಂದುಬಿಟ್ಟಿದೆ. ಬಹುಶಃ ಹೆಣ್ಣುಮಕ್ಕಳ ಕೈಯಿಂದಲೂ ಕೂಡ ಇಷ್ಟು ಅನ್ಯಾಯವಾಗುತ್ತದೆಂದು ನನಗೆ ಗೊತ್ತಿರಲಿಲ್ಲ. ಪ್ರತಿಯೊಂದು ಜಿಲ್ಲೆಗೆ ಅವರು discretion amount ಕೊಟ್ಟಿದ್ದಾರೆ. ರೂ.50 ಲಕ್ಷ, 20 ಲಕ್ಷ, 30 ಲಕ್ಷ ಈ ರೀತಿ ಕೊಟ್ಟಿದ್ದಾರೆ. ಆ MLA ಗಳು ಮಾತ್ರ ರಾಜ್ಯದ ಶಾಸಕರೇ? ಈ ಸದನದ ಶಾಸಕರೇ? ಬೇರೆಯವರು ಶಾಸಕರಲ್ಲವೇ? ನಿಮ್ಮ MLA ಗಳಿಗೆ ಬೇಕಾದರೆ, ನೀವು 10 ಲಕ್ಷ ರೂಪಾಯಿಗಳನ್ನು ಕೊಡಿ. ಆದರೆ, ಎಲ್ಲರಿಗೂ ಕೊಡಬೇಕಲ್ಲವೇ? ಅವರೇನು ಮಾಡುತ್ತಿದ್ದಾರೆಂದರೆ, ಒಂದೇ ಲಿಸ್ಟ್ ಮಾಡಿದರೆ ಗೊತ್ತಾಗುತ್ತದೆಂದು individual, district-wise or taluk-wise ಕೊಟ್ಟಿದ್ದಾರೆ. ಇದರಲ್ಲಿ ನೋಡಿದರೆ ಸುಮಾರು ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಯಾವ basis ಮೇಲೆ ಕೊಟ್ಟಿದ್ದಾರೆ? Twelfth Finance Commission ಹಣವನ್ನು ಕೂಡ ಇಟ್ಟುಕೊಂಡು ಕೊಟ್ಟಿದ್ದಾರೆ. Regular funds ಅನ್ನು discretion ಎಂದು ಇಟ್ಟುಕೊಂಡು ಕೊಟ್ಟಿದ್ದಾರೆ. ಇದಕ್ಕೆ ಏನು ಹೇಳಬೇಕು? ಈ ರೀತಿಯಾಗಿ ನೀವು ಒಂದು ಕಡೆ finance guidelines follow ಮಾಡುವುದಿಲ್ಲ. Budget guidelines ಅನ್ನೂ follow ಮಾಡುವುದಿಲ್ಲ. ರಾಜ್ಯದ

ಹಿತವನ್ನೂ ನೋಡುವುದಿಲ್ಲ ಅಥವಾ ಎಲ್ಲರಿಗೂ ಸರಿಸಮಾನವಾಗಿ ಹಂಚುತ್ತೀರಿ ಎಂದರೆ ಅದೂ ಇಲ್ಲ. ಅಂದರೆ, ಈಗ ಪಕ್ಷಪಾತದ ರಾಜಕಾರಣ, ಪಕ್ಷಪಾತದ development ಅಂದರೆ ಯಾರನ್ನು ಕೇಳಬೇಕು? ನಾವು ಈ ಸದನದಲ್ಲಿಯೇ ಕೇಳಬೇಕಲ್ಲವೇ? ಈ ರೀತಿಯಾಗಿ ಯಾರೂ ಅನ್ಯಾಯ ಮಾಡಿಲ್ಲ. Rural Development ನಲ್ಲೂ ಅದೇ ರೀತಿ, PWD ನಲ್ಲೂ, ನೀರಾವರಿಯಲ್ಲೂ, ಸಣ್ಣ ನೀರಾವರಿಯಲ್ಲೂ ಅದೇ ರೀತಿ ಇದೆ. ಹೀಗಾದರೆ ಅಭಿವೃದ್ಧಿ ಹೇಗಾಗುತ್ತದೆ? ಅದಕ್ಕೆ, ಇದೆಲ್ಲವನ್ನೂ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಇನ್ನೂ ಹೇಳಬಹುದಿತ್ತು. ಆದರೆ, ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕನಿಷ್ಠ ಅದೆಲ್ಲವನ್ನೂ ತೆಗೆದು ಸರಿಪಡಿಸಿ ಎಲ್ಲರಿಗೂ ಸಮನಾಗಿ ಹಂಚಿ. ಏಕೆಂದರೆ, ಎಲ್ಲಾ ಜಿಲ್ಲೆಯಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ, ರಸ್ತೆಯ ಸಮಸ್ಯೆ ಇದೆ, ಹೀಗೆ ಅನೇಕ ಸಮಸ್ಯೆಗಳಿವೆ. ಅವೆಲ್ಲಾ ಸಮಸ್ಯೆಗಳು ನಿವಾರಣೆಯಾಗಬೇಕೆಂದರೆ ಸಮನಾಗಿ ಹಂಚಬೇಕು. ಪಂಚಾಯತ್ ರಾಜ್‌ಗೆ ಸ್ವಾಯತ್ತತೆ ಕೊಡಬೇಕೆಂದು ನಾವು ಒಂದು ಕಡೆ ದೊಡ್ಡದಾಗಿ ಮಾತನಾಡುತ್ತೇವೆ, ಸಮಾನ ದೃಷ್ಟಿಯಿಂದ ನೋಡಬೇಕೆಂದು ಹೇಳುತ್ತೇವೆ, ಇನ್ನೊಂದು ಕಡೆ discretionary amount ಎಂದು ಕೋಟಿಗಟ್ಟಲೆ ಇಟ್ಟುಕೊಂಡರೆ ಹೇಗೆ ಆಗುತ್ತದೆ?

ಶ್ರೀ ಅಶೋಕ ಮಹಾದೇವಪ್ಪ ಪಟ್ಟಣ :- ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಬೆಳಗಾಂ ಜಿಲ್ಲೆಯಲ್ಲಿ ಕೇವಲ ಬಿಜೆಪಿ ಸದಸ್ಯರಿಗೇ 2 ಕೋಟಿ 68 ಲಕ್ಷ ರೂ. ಕೊಟ್ಟಿದ್ದಾರೆ. ಆದರೆ, ಕಾಂಗ್ರೆಸ್ ಶಾಸಕರಿಗೆ ಒಂದು ರೂಪಾಯಿ ಸಹ ಕೊಟ್ಟಿಲ್ಲ. Central Government fund ನಲ್ಲೂ ಕೂಡ ಗ್ರಾಮೀಣ ಅಭಿವೃದ್ಧಿ ಇಲಾಖೆಯ 2ನೇ ತಾರೀಖು ಬಂದಿರುವ circular ಇದೆ. ಬೇಕಾದರೆ ತಾವು ನೋಡಿ. ಬೆಳಗಾಂ ಜಿಲ್ಲೆಯಲ್ಲಿ ಕೇವಲ ಬಿಜೆಪಿ ಶಾಸಕರಿಗೆ ಮಾತ್ರ ಅನುದಾನ release ಮಾಡಿದ್ದಾರೆ. ನಾವೆಲ್ಲ ಏನು ಮಾಡಿದ್ದೇವೆ?

ಶ್ರೀ ವೀರಣ್ಣ ಚರಂತಿಮಠ್ :- ಎಲ್ಲಾ ಜಿಲ್ಲೆಯಲ್ಲೂ ಹಾಗೆಯೇ ಆಗಿದೆ.

(ಗೊಂದಲ)

ಶ್ರೀ ಯು.ಟಿ. ಖಾದರ್ :- ಮಾನ್ಯ ಅಧ್ಯಕ್ಷರೆ, ನೀವು ನಮಗೆ ನ್ಯಾಯ ಒದಗಿಸಿಕೊಡಲಿಲ್ಲವೆಂದರೆ ಕಷ್ಟವಾಗುತ್ತದೆ. (ಗೊಂದಲ) ಇಲ್ಲವೆಂದರೆ ನ್ಯಾಯಾಲಯಕ್ಕೆ ಹೋಗುವಂಥ ಅವಕಾಶ ಕಲ್ಪಿಸಿದಂತಾಗುತ್ತದೆ.

(ಗೊಂದಲ)

ಶ್ರೀ ಅಶೋಕ ಮಹಾದೇವಪ್ಪ ಪಟ್ಟಣ :- ಅಭಿವೃದ್ಧಿ ಕೆಲಸಕ್ಕೆ ಎಲ್ಲರಿಗೂ ಕೊಡುತ್ತೇವೆಂದು ಹೇಳುತ್ತೀರಿ. ಆದರೆ, ಒಂದು ರೂಪಾಯಿ ಸಹ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು :- ಅವರು ಏನು ಹೇಳುತ್ತಾರೆಂದು ಕೇಳೋಣ. (ಗೊಂದಲ) ಆಯಿತು, ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೆ, ತಾವು ಮಾತನಾಡಿ. (ಗೊಂದಲ) ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ ಕೊಡಲಿ. (ಗೊಂದಲ) ಈರ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ. ಆಮೇಲೆ ಅವರು ಏನು ಉತ್ತರ ಕೊಡುತ್ತಾರೆಂದು ನೋಡೋಣ. (ಗೊಂದಲ) ವಿರೋಧ ಪಕ್ಷದ ನಾಯಕರೆ, ತಾವು ಮುಂದುವರೆಸಿ. ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. (ಗೊಂದಲ)

ಶ್ರೀ ಯು.ಟಿ. ಖಾದರ್ :- ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಪೈಸೆ ಸಹ ಕೊಟ್ಟಿಲ್ಲ.

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೇ ತಾವು ಮುಂದುವರೆಸಿ.

(ಗೊಂದಲ)

ಶ್ರೀ ಅಶೋಕ್ ಮಹಾದೇವಪ್ಪ ಪಟ್ಟಣ :- ಗ್ರಾಮೀಣಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು ಇದರ ಬಗ್ಗೆ details ಕೊಡಬೇಕು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ. ತಾವೆಲ್ಲ ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಾವು ಯೀಲ್ಡ್ ಆಗಬೇಡಿ. ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ ಬಳಿಕ ಸರ್ಕಾರದ ಕಡೆಯಿಂದ ಉತ್ತರ ಕೊಡಲಿ. ಆಮೇಲೆ ಏನು ಮಾಡಬೇಕೆಂಬುದರ ಬಗ್ಗೆ ವಿಚಾರ ಮಾಡೋಣ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಮಗೆ ನ್ಯಾಯ ಸಿಗದಿದ್ದರೆ ನಾವು ಕೋರ್ಟ್‌ಗೆ ಹೋಗಬೇಕಾಗುತ್ತದೆ. ಅವರ ಮೇಲೆ ನಮಗೆ ನಂಬಿಕೆ ಇಲ್ಲ. ಆದ್ದರಿಂದ, ಇದು ಸರಿಯೇ ಅಥವಾ ತಪ್ಪೇ ಎಂದು ನೀವೇ ಹೇಳಿ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಇದಕ್ಕೆ PWD ಮಿನಿಸ್ಟರ್ ಉತ್ತರ ಕೊಡಬೇಕಾಗಿಲ್ಲ. ಆರ್‌ಡಿಪಿಆರ್ ಮಿನಿಸ್ಟರ್ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು :- ಅವರೇ ಉತ್ತರ ಕೊಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ :- ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುತ್ತೇನೆ. ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :- ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ ಮುಗಿಸಲಿ. ಆನಂತರ ತಾವು ಉತ್ತರ ಕೊಡಿ.

ಶ್ರೀ ಯು.ಟಿ. ಖಾದರ್ :- ಮಾನ್ಯ ಅಧ್ಯಕ್ಷರೆ, ಆ ಆರ್ಡರ್‌ಗೆ ತಕ್ಷಣ ತಡೆಯಾಜ್ಞೆ ತರಬೇಕು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಇದನ್ನು ಸೆಟ್‌ರೆಟ್ ಮಾಡದಿದ್ದರೆ ನಾವು ಕೋರ್ಟ್‌ಗೆ ಹೋಗುತ್ತೇವೆ. ನೀವುಗಳು ಬೇಕಾದ್ದನ್ನು ಮಾಡಿಕೊಳ್ಳಬಹುದೆಂದು ತಿಳಿದುಕೊಂಡಿದ್ದೀರಾ?

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು :- ನ್ಯಾಯ ಸಿಗಲೇ ಬೇಕಾಗುತ್ತದೆ. ಈ ಸಭೆಯಲ್ಲಿ ನ್ಯಾಯ ಸಿಗದೇ ಹೋದರೆ, ಇದರ ಬಗ್ಗೆ ಮುಂದಾಲೋಚನೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಯು.ಟಿ. ಖಾದರ್ :- ನಾವು ನ್ಯಾಯದ ಪರವಾಗಿದ್ದೇವೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :-ಮಾನ್ಯ ಅಧ್ಯಕ್ಷರೆ, ನಾವು ಕೋರ್ಟ್‌ಗೆ ಹೋಗುತ್ತೇವೆ. We will not tolerate this non sense.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಎಲ್ಲಾ ವಿವರಣೆಗಳನ್ನು ಈ ಸದನದ ಮಂದೆ ಇಡತಕ್ಕಂಥ ಪ್ರಯತ್ನವನ್ನು ತಮ್ಮ ಡಾಕ್ಯುಮೆಂಟ್ ಮೂಲಕವೇ ನಾವು ಮಾಡಿದ್ದೇವೆ. ಇದು ಸರಿ ಇದೆ ಎಂದು ನಿಮ್ಮ ಮನಸ್ಸಿಗೆ ಒಪ್ಪಿದರೆ ಇದನ್ನೇ ಮುಂದುವರೆಸಿ. ಇಲ್ಲದಿದ್ದರೆ, ಇದನ್ನು ಸರಿಪಡಿಸಬೇಕು. ಏಕೆಂದರೆ ಇಡೀ ರಾಜ್ಯದ ಅಭಿವೃದ್ಧಿ ಜವಾಬ್ದಾರಿ ನಮ್ಮ ಮೇಲೆ ಇದೆ ಎನ್ನತಕ್ಕಂಥ ಭಾವನೆ ನಿಮಗೆ ಇದ್ದರೆ ಇದನ್ನು ಬದಲಾವಣೆ ಮಾಡಿ. ಅದು Rural Development or PWD ಅಥವಾ ಯಾವುದೇ ಇಲಾಖೆಯದಿರಬಹುದು. ನಿಮ್ಮ ಶಾಸಕರಿಗೆ ಬೇಕಾದರೆ 10 ಲಕ್ಷ ರೂಪಾಯಿ ಹೆಚ್ಚಿಗೆ ಕೊಡಿ ನಾವೇನು ಬೇಡವೆಂದು ಹೇಳುವುದಿಲ್ಲ. ಅಥವಾ ಒಂದು ದೊಡ್ಡ ಪ್ರಾಜೆಕ್ಟ್‌ಗೆ 50 ಕೋಟಿ ರೂಪಾಯಿ ಕೊಡುವುದಕ್ಕೆ ನಾವೆಲ್ಲರೂ ಸಹ ಒಪ್ಪುತ್ತೇವೆ. ಆದರೆ, ಸಣ್ಣ ಪುಟ್ಟ ಕೆಲಸಗಳಿಗೆ ಅಂದರೆ 10 ರಿಂದ 20 ಲಕ್ಷ ರೂಪಾಯಿಗಳ ಕಾಮಗಾರಿಗಳಾದ ರಸ್ತೆ, ಕುಡಿಯುವ ನೀರು, ಸ್ಕೂಲ್ ಕಟ್ಟಡ, ಇಂಥದ್ದರಲ್ಲಿಯೂ ಕೂಡ ರಾಜಕೀಯ ಮಾಡಿದರೆ ಇದಕ್ಕೆ ನಾವು ಏನು ಹೇಳಬೇಕು? ದಲಿತರ ಬಗ್ಗೆ ನಾವೆಲ್ಲರೂ ಸಾಕಷ್ಟು ಮಾತುಗಳನ್ನು ಮಾತನಾಡುತ್ತೇವೆ. ನನ್ನನ್ನು ಸೇರಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಷಯದ ಬಗ್ಗೆ ನನ್ನದೇನು ಅಪವಾದ ಇಲ್ಲ. 11ನೇ ಪ್ಲಾನಿಂಗ್ ಕಮಿಷನ್‌ರವರು ನಿಗದಿ ಮಾಡಿರುವ Five year planning ಪ್ರಕಾರ Population based ಮೇಲೆ ಎಸ್‌ಸಿ:ಎಸ್‌ಟಿ ವರ್ಗಕ್ಕೆ ಹಣ ನಿಗದಿ ಮಾಡುವಥಂದ್ದು ತಮಗೆಲ್ಲಾ ಗೊತ್ತಿದೆ. ಈ ಹಿಂದೆ ಜನಸಂಖ್ಯೆಯ ಪರ್ಸೆಂಟೇಜ್ ಮೇಲೆ ಅಂದಾಜು ಹಾಕಿ ಕೊಡುತ್ತಿದ್ದರು. ಆಗ ಕೆಲವು ಜನ ಅನುಷ್ಠಾನ ಮಾಡುತ್ತಿದ್ದರು, ಕೆಲವು ಜನ ಅನುಷ್ಠಾನ ಮಾಡುತ್ತಿರಲಿಲ್ಲ. ಈ ರೀತಿಯ ವ್ಯವಸ್ಥೆಯ ಬಗ್ಗೆ ಕೆಲವರು ಯೋಜನಾ ಆಯೋಗಕ್ಕೆ ದೂರು ಕೊಟ್ಟ ಮೇಲೆ ಅವರು ಕೊನೆಗೆ ಒಂದು ನಿರ್ಣಯವನ್ನು ತೆಗೆದುಕೊಂಡರು. ಅದೇನೆಂದರೆ, Population

based ಮೇಲೆ ಅಲೋಕೇಷನ್ ಮಾಡಬೇಕು. ಅಲೋಕೇಷನ್ ಮಾಡಿದಂಥ ಹಣ ಖರ್ಚು ಆಗದಿದ್ದರೆ ಅದನ್ನು ಮುಂದಿನ ವರ್ಷಕ್ಕೆ ಕ್ಯಾರಿ ಓವರ್ ಮಾಡಬೇಕೆಂದು ನಿರ್ಣಯ ಮಾಡಿದರು. ಆದರೆ, 2008-09ನೇ ಸಾಲಿನಲ್ಲಿ 1263 ಕೋಟಿ ರೂಪಾಯಿ ಪರಿಶಿಷ್ಟ ಪಂಗಡಕ್ಕೆ ಅಲಾಟ್ ಆಗಿದೆ. ಇದರಲ್ಲಿ 350 ಕೋಟಿ ರೂಪಾಯಿ ಬಿಡುಗಡೆ ಯಾಗಿರತಕ್ಕಂಥದ್ದು ತಮಗೂ ಸಹ ಗೊತ್ತಿದೆ. ಬಿಡುಗಡೆಯಾಗಿರುವ 350 ಕೋಟಿ ರೂಪಾಯಿ ಖರ್ಚಾಗಿದೆ. ಮತ್ತೆ 913 ಕೋಟಿ ರೂಪಾಯಿ ಹಾಗೆಂಯೇ ಉಳಿದುಕೊಂಡಿದೆ. ಈ 913 ಕೋಟಿ ರೂಪಾಯಿ ಇನ್ನು ಎರಡು ತಿಂಗಳಲ್ಲಿ ಖರ್ಚಾಗುತ್ತದೆಯೇ ಎಂಬುದನ್ನು ತಾವೇ ಹೇಳಿ? ಹಿಂದಿನ 7 ತಿಂಗಳಲ್ಲಿ ಇದನ್ನು ತಾವೇಕೆ ರಿವ್ಯೂ ಮಾಡಲಿಲ್ಲ? ಇದು ನೇರವಾಗಿ ಬಡವರಿಗೆ ಅನುಕೂಲವಾಗುವಂಥ ಕಾರ್ಯಕ್ರಮವಾಗಿದೆ. ಆದರೆ, ಇದರ ಬಗ್ಗೆ ನೀವು ಚಿಂತನೆ ಏಕೆ ಮಾಡಲಿಲ್ಲ? ನೀರಾವರಿಗೆ 50% PWD ಯಲ್ಲಿ 60% ತಂದಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಏಕೆ ಮುಂದಕ್ಕೆ ಹೋಗಲಿಲ್ಲ? ಕೊನೇ ಪಕ್ಷ 50% ಆದರೂ ಮಾಡಬೇಕಾಗಿತ್ತಲ್ಲವೇ? ಅದನ್ನು ಮಾಡಿಲ್ಲ. ಇದೇ ರೀತಿಯಾಗಿ ಪರಿಶಿಷ್ಟ ಜಾತಿಯವರಿಗೆ 3232 ಕೋಟಿ ರೂಪಾಯಿ ನಿಗದಿ ಮಾಡಿದ್ದಾರೆ.

ಅಧ್ಯಕ್ಷರು :- ಮೊನ್ನೆದಿವಸ ಈ ವಿಷಯ ಸದನದಲ್ಲಿ ಚರ್ಚೆಯಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈ ವಿಷಯ ಚರ್ಚೆಯಾಗಿದೆ. ಆದರೆ, ಈಗ ಏತಕ್ಕಾಗಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಅಭಿವೃದ್ಧಿ ಪರ ಇರತಕ್ಕಂಥವರು ಇಷ್ಟೊಂದು ಹಣ ಇಟ್ಟುಕೊಂಡು ಕಣ್ಣು ಮುಚ್ಚಿಕೊಂಡು ಕುಳಿತರೆ ಅಭಿವೃದ್ಧಿಯಾಗುತ್ತದೆಯೇ? ಅಥವಾ ಅಭಿವೃದ್ಧಿ ಮಂತ್ರವನ್ನು ಜಪಿಸಿದರೆ ಸಾಕೆ? ಇದಕ್ಕಾಗಿಯೇ ಅವರ ಗಮನಕ್ಕೆ ತರುತ್ತಿದ್ದೇನೆ. ಹಣ ಇದ್ದರೂ ಕೂಡ ಇನ್ನೂ 25%ನಷ್ಟು ಹಣ ಖರ್ಚಾಗಿಲ್ಲವೆಂದರೆ ಹೇಗೆ? ಹಣ ಇಲ್ಲದಿದ್ದರೆ ಬೇರೆ ವಿಚಾರ. ಹಣ ಇದ್ದಾಗಲೂ ಕೂಡ ಖರ್ಚು ಮಾಡತಕ್ಕಂಥ ಧೈರ್ಯ ತೋರಿಸದಿದ್ದರೆ ಅಥವಾ ಪ್ರಯತ್ನವನ್ನು ಮಾಡದಿದ್ದರೆ ಆ ಜನರ ಅಭಿವೃದ್ಧಿ ಹೇಗೆ ಸಾಧ್ಯವಾಗುತ್ತದೆ? ಕೆಲವು ಕಡೆ ಇದೇ ಹಣವನ್ನು ರೆಗ್ಯುಲರ್ ಬಜೆಟ್‌ನಲ್ಲಿ ತೋರಿಸಿದ್ದಾರೆ. ಹೌಸಿಂಗ್ ಸ್ಕೀಮ್ ಇಡೀ ರಾಜ್ಯದಲ್ಲಿ ಎಲ್ಲರಿಗೂ applicable ಇದೆ. ಆದರೆ, ಇದರಲ್ಲಿ ಯಾವ ರೀತಿ ತೋರಿಸುತ್ತಿದ್ದಾರೆಂದರೆ, ಇಲ್ಲಿಯ ಹಣವನ್ನು ಆಶ್ರಯ ಯೋಜನೆಗೆ ಕೊಟ್ಟು ಜನಸಂಖ್ಯೆ ಆಧಾರದ ಮೇಲೆ ನಿಗದಿ ಮಾಡಿರುವ 18%ನಷ್ಟು ಹಣವನ್ನು ಯೋಜನೆಗಳಿಗೆ ಕೊಟ್ಟಿರುವ ಹಣದಲ್ಲಿ ತೋರಿಸುತ್ತಾರೆ. ಆದ್ದರಿಂದ, ಈ ರೀತಿಯಾಗಿ

ಮಾಡಿರುವುದರಿಂದ ಯಾವುದೂ ಕೂಡ ಸರಿಯಾಗುವುದಿಲ್ಲ. ಮತ್ತೆ ಅಭಿವೃದ್ಧಿ ಕುಂಠಿತವಾಗಿದೆ ಎಂಬುದಕ್ಕೆ ಈ ಎಲ್ಲಾ ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ ಹೊರತಾಗಿ ಬೇರೆ ಏನೂ ಉದ್ದೇಶ ಇಲ್ಲ. ಕಳೆದಸಾರಿ ಹೆಚ್ಚು ಕಡಿಮೆ 57 ಸಾವಿರ ಕೋಟಿ ರೂಪಾಯಿಯ ಬಜೆಟ್‌ನ್ನು ಕೊಟ್ಟಿದ್ದಾರೆ. ಅದರೊಳಗೆ ಇರತಕ್ಕಂಥದ್ದನ್ನು ಅನುಷ್ಠಾನಕ್ಕೆ ತರಬೇಕಾದರೆ ನಿಮ್ಮ resource mobilization ಅಷ್ಟೇ ಬೇಕಾಗುತ್ತದೆ. ನಿನ್ನೆ ದಿವಸ ತಾವು Mid-Term Financial Review Report ಅನ್ನು ಕೊಟ್ಟಿದ್ದೀರಿ. ಇದರ ಪ್ರಕಾರ ಸುಮಾರು 2500 ಕೋಟಿ ರೂಪಾಯಿ ಖೋತ ಬರುತ್ತದೆಂದು ತಾವು ಹೇಳಿದ್ದೀರಿ. ಮತ್ತೆ ನೀವು ಕಮರ್ಷಿಯಲ್ ಟ್ಯಾಕ್ಸ್‌ನಿಂದ ಮತ್ತು ಮೋಟಾರ್ ವೆಹಿಕಲ್ಸ್‌ನಿಂದ ಹಾಗೂ ಅಬಕಾರಿ ಇಲಾಖೆಯಿಂದ, Stamp and Registration ನಿಂದ ಇಷ್ಟು ಹಣ ಬರುತ್ತದೆಂದು ತಾವು ಏನು ನಿರೀಕ್ಷೆ ಮಾಡಿದ್ದೀರೋ ಅಷ್ಟು ಹಣ ಇವುಗಳಿಂದ ಬರುತ್ತಿಲ್ಲ. ಮತ್ತೆ ಬೆಂಗಳೂರಿನಲ್ಲಿರುವ ಜಮೀನನ್ನು ಮತ್ತು ಬೇರೆ ಕಡೆ ಇರತಕ್ಕಂಥ ಜಮೀನಗಳನ್ನು ಮಾರಾಟ ಮಾಡಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ನಾವು ಸಂಗ್ರಹ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ, ಈಗ ಆ ಮೂರು ಸಾವಿರ ಕೋಟಿ ರೂಪಾಯಿಗಳು ಇಲ್ಲ. ಈಗ ನೀವು ಏನು ತೋರಿಸುತ್ತಿದ್ದೀರಿ ಅದನ್ನು ಮಾರ್ಚ್ ತಿಂಗಳಲ್ಲಿ ಯಾವ ರೀತಿಯಾಗಿ ತೋರಿಸುತ್ತೀರೋ ಗೊತ್ತಿಲ್ಲ. ನನ್ನ ಅಂದಾಜಿನ ಪ್ರಕಾರ ಸುಮಾರು 5 ಸಾವಿರದಿಂದ 6 ಸಾವಿರ ಕೋಟಿ ರೂಪಾಯಿ ಖೋತ ಬರುತ್ತದೆ. ಹೆಚ್ಚು ಕಡಿಮೆ ಸುಮಾರು 8 ಸಾವಿರ ಕೋಟಿ ರೂಪಾಯಿ ಬರುತ್ತದೆಂದು ಮಾನ್ಯ ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ. ಸುಮಾರು 6 ಸಾವಿರ ಕೋಟಿ ರೂಪಾಯಿ ಆಗಬಹುದೆಂದು ನಾನು ಲೆಕ್ಕ ಹಾಕಿದ್ದೆ. ಆದರೆ, ಅವರು ಲೆಕ್ಕ ಮಾಡಿದ ಪ್ರಕಾರ ಸುಮಾರು 8 ಸಾವಿರ ಕೋಟಿ ರೂಪಾಯಿ ಖೋತವಾಗುತ್ತದೆ. ಈ 8 ಸಾವಿರ ಕೋಟಿ ರೂಪಾಯಿ ಅಭಿವೃದ್ಧಿ ಕೆಲಸಕ್ಕೆ ಮಾತ್ರ ಹೋಗತಕ್ಕಂಥದ್ದಾಗಿದೆ. ಅಂದರೆ, ನೀವೇ ಗುರುತಿಸಿರತಕ್ಕಂಥ ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕಾಗಿರತಕ್ಕಂಥದ್ದಾಗಿದೆ. ಆದರೆ, ಈಗ 8 ಸಾವಿರ ಕೋಟಿ ರೂಪಾಯಿಗಳ ಕೆಲಸ ಇವತ್ತಿನ ದಿವಸ ನಿಂತು ಹೋಗುತ್ತದೆ. ಈ ಹಣ ಬರುತ್ತದೆಂದು ತಿಳಿದುಕೊಂಡು ಮಾನ್ಯ ಬೊಮ್ಮಾಯಿರವರ ಇಲಾಖೆಗೆ ಮತ್ತು ಸಣ್ಣ ನೀರಾವರಿ ಇಲಾಖೆಗೆ ಹಾಗೂ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಗೆ, ಸಮಾಜ ಕಲ್ಯಾಣ ಇಲಾಖೆಗೆ, ಆರೋಗ್ಯ ಇಲಾಖೆಗೆ ಮತ್ತು ಮಾನ್ಯ ಉದಾಸಿಯವರ ಇಲಾಖೆಗೆ ಅಲಾಟ್ ಮಾಡಿರತಕ್ಕಂಥದ್ದರಲ್ಲಿ ಹೆಚ್ಚು ಕಡಿಮೆ 8 ಸಾವಿರ

ಕೋಟಿ ರೂಪಾಯಿ ಖೋತ ಮಾಡಿದಂತಾಗಿದೆ. ಆದ್ದರಿಂದ, ಅಭಿವೃದ್ಧಿಗೆ ಹಣ ಎಲ್ಲಿಂದ ತರಲಾಗುತ್ತದೆಂಬುದನ್ನು ತಾವು ಹೇಳಬೇಕು. ಮಾಡುತ್ತೇವೆ, ನೋಡುತ್ತೇವೆ ಎಂದು ಹೇಳುವುದು ಸುಲಭ. ಆದರೆ ಇನ್ನು ಕೇವಲ ಎರಡು ತಿಂಗಳು ಅಂದರೆ, ಫೆಬ್ರವರಿ ಮತ್ತು ಮಾರ್ಚ್ ತಿಂಗಳು ಮಾತ್ರ ಉಳಿದಿದೆ. ಇವತ್ತಿನ ದಿವಸ ನಿಮ್ಮ ಹಣಕಾಸಿನ ಪರಿಸ್ಥಿತಿ ಕೂಡ ಕೆಟ್ಟು ಹೋಗಿದೆ. ಮತ್ತೆ ನಿಮ್ಮ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲದೆ ಇರುವುದರಿಂದ ಕೆಲಸ ಆಗುತ್ತಿಲ್ಲ. ಮತ್ತೆ ಇರತಕ್ಕಂಥ ಹಣದಲ್ಲಿಯೂ ಕೂಡ discrimination and partiality ಮಾಡುತ್ತಿದ್ದೀರಿ. ಇವತ್ತಿನ ದಿವಸ ಎಲ್ಲಾ ಇಲಾಖೆಗಳು ಕೂಡ resource mobilization ಮಾಡತಕ್ಕಂಥದ್ದರಲ್ಲಿ ಹಿಂದೆ ಬಿದ್ದಿವೆ ಎಂದು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಬಯಸುತ್ತೇನೆ.

ಮತ್ತೆ ನೀವು ತಯಾರು ಮಾಡಿದ್ದಂಥ ಅಂಕಿ-ಅಂಶಗಳು ಕೂಡ ಇವತ್ತಿನ ದಿವಸ ಹುಸಿಯಾಗುತ್ತಿವೆ. ಆದ್ದರಿಂದ, ಇಂಥ ಒಂದು ಸಂದರ್ಭದಲ್ಲಿ ಇವರಿಂದ ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಮುಂದೆ ಬರುವಂಥ ಕಾಲ ಇನ್ನು ಕಷ್ಟದ ಕಾಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಮುಂದಿನ ಲೋಕಸಭಾ ಚುನಾವಣೆಯನ್ನು ದೃಷ್ಟಿಕೋನವಾಗಿಟ್ಟುಕೊಂಡು 19ನೇ ತಾರೀಖಿನ ದಿವಸ ಇವರು ಬಜೆಟ್ ಮಂಡನೆ ಮಾಡುತ್ತಿದ್ದಾರೆ. ಈ ಬಜೆಟ್‌ನಲ್ಲಿಯೂ ಕೂಡ 2 ರೂಪಾಯಿಗೆ ಅಕ್ಕಿ, 1 ರೂಪಾಯಿಗೆ ಗೋಧಿ ಮತ್ತು ಸೈಕಲ್ ಇದೇ ರೀತಿಯಾಗಿ ಏನೇನು ಬರುತ್ತವೆಯೋ ಗೊತ್ತಿಲ್ಲ. ಏಕೆಂದರೆ, ಅವರ ಚೀಲದಿಂದ ಇನ್ನೂ ಹೊರಕ್ಕೆ ಬರಬೇಕಾಗಿದೆ. ಆದರೆ, ಇವರ ಹತ್ತಿರ ದುಡ್ಡು ಇಲ್ಲ. ಅಂದರೆ, ಕೈಯಲ್ಲಿ ಕಾಸು ಇಲ್ಲ, ಮೈಯಲ್ಲಿ ಉಲ್ಲಾಸ ಇಲ್ಲವೆಂದು ನಮ್ಮ ಕಡೆ ಹೇಳುತ್ತಾರೆ. ಈ ರೀತಿಯಲ್ಲಿ ಇವರ ಕೈಯಲ್ಲಿ ಕಾಸು ಇಲ್ಲ. ಈಗಾಗಲೇ 8 ಸಾವಿರ ಕೋಟಿ ರೂಪಾಯಿ ಖೋತವಾಗಿದೆ. ಆದರೆ, ಇವರು populist scheme ಗಳನ್ನು introduce ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತಾರೆ. ಏಕೆಂದರೆ, ಲೋಕಸಭಾ ಚುನಾವಣೆಗೆ ಹೋಗಬೇಕಾಗಿರುವುದರಿಂದ ಇವೆಲ್ಲಾ ಮಾಡುತ್ತಾರೆ. ಮಾನ್ಯ ಅಡ್ವಾಣಿ ಅಥವಾ ಮಾನ್ಯ ಮೋದಿಯವರಿಗೆ ಪ್ರಧಾನ ಮಂತ್ರಿ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ, ಈಗಿನ ಪರಿಸ್ಥಿತಿ ನೋಡಿದರೆ ಅದೇನು ಸಾಧ್ಯವಾಗುವುದಿಲ್ಲ. ಈಗಿನ ಪರಿಸ್ಥಿತಿ ನೋಡಿದರೆ ಇದೆಲ್ಲಾ ಸಾಧ್ಯವಿಲ್ಲ. ಇವತ್ತಿನ ದಿವಸ ಆರ್ಥಿಕ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಹಿಂದೇಟು ಆಗಿದೆ. ಮತ್ತೆ ಶಾಸಕರುಗಳಿಗೆ ತಾರತಮ್ಯ

ಮಾಡಿದ್ದೀರಿ. Rural Development and PWD ಯಲ್ಲಿ ತಾರತಮ್ಯ ಮಾಡಿದ್ದೀರಿ. ಎಲ್ಲಾ ದೃಷ್ಟಿಯಿಂದ ಇವತ್ತಿನ ದಿವಸ ತಾರತಮ್ಯ ಮಾಡಿ ಶಾಸಕರುಗಳಿಗೆ ಮೋಸ ಮಾಡಿದ್ದೀರಿ. ನಿಜವಾಗಿಯೂ ಕೂಡ ಇದು ಸರಿಯಲ್ಲ. ಆದ್ದರಿಂದ, ಇದನ್ನು ಸರಿಪಡಿಸಿ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದನ್ನು ಸರಿಪಡಿಸದಿದ್ದರೆ, ಇದರ ಪರಿಣಾಮ ಸರಿ ಇರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಮಾತನಾಡುವುದಕ್ಕೆ ತಾವು ಇಷ್ಟು ಸಮಯ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ಕನಿಷ್ಠ ಈಗಲಾದರೂ ಪರಮಾತ್ಮ ಅಥವಾ ನಿಸರ್ಗವೋ ಅವರಿಗೆ ಒಳ್ಳೆಯ ಬುದ್ಧಿ ಕೊಟ್ಟು ಒಳ್ಳೆಯ ಬಜೆಟ್ ಮಾಡಿ ಇದನೆಲ್ಲಾ ಸರಿಪಡಿಸಲೆಂದು ಹೇಳುತ್ತೇನೆ. ಇಲ್ಲದಿದ್ದರೆ ಅವರ ಹಾದಿ ಅವರಿಗೆ, ನಮ್ಮ ಹಾದಿ ನಮಗೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಧನ್ಯವಾದಗಳು.

2. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತನಲ್ಲಿ ದಿನಾಂಕ 23.1.2009 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1)2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ

2)2009ನೇ ಸಾಲಿನ ಕರ್ನಾಟಕ ದೇವದಾಸಿಯರ ಸಮರ್ಪಣ ನಿಷೇಧ (ತಿದ್ದುಪಡಿ)ವಿಧೇಯಕ

3)2009ನೇ ಸಾಲಿನ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ